MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 269 | ಭಾನುವಾರ : 10-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 269 | SUNDAY : 10-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಇಂದು ಬೆಂಗಳೂರಿಗೆ ಮೋದಿ



**ಬೆಂಗಳೂರು,ಆ.09**–ಬೆಂಗಳೂರು–ಬೆಳಗಾವಿ ನಡುವೆ ವಂದೇ ಭಾರತ್ ರೈಲು ಸೇರಿದಂತೆ ದೇಶದ ಹೊಸದಾಗಿ ಮೂರು ವಂದೇ ಭಾರತ್ ರೈಲು ಮತ್ತು ನಮ್ಮ ಮೆಟ್ರೊದ ಹಳದಿ ಮಾರ್ಗ ಉದ್ಘಾಟನೆ ಹಾಗೂ ಮೆಟ್ರೊ 3ನೇ ಹಂತಕ್ಕೆ ಶಂಕು ಸ್ಥಾಪನೆ ನೆರವೇರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ.

ದೆಹಲಿಯಿಂದ ವಿಶೇಷ ವಿಮಾನದಲ್ಲಿ ಎಚ್‌ಎಎಲ್ ವಿಮಾನನಿಲ್ದಾಣಕ್ಕೆ ಬೆಳಿಗ್ಗೆ 10.30ಕ್ಕೆ ಬಂದಿಳಿಯುವ ಪ್ರಧಾನಿ ಮೋದಿ ಅವರು ವಿಮಾನನಿಲ್ದಾಣದಿಂದ ಬೆಂಗಳೂರಿನ ಮೇಖ್ರಿ ವೃತ್ತದ ಬಳಿ ಇರುವ ವಾಯು ಪಡೆಯ ಹೆಲಿಪ್ಯಾಡ್‌ಗೆ ಹೆಲಿಕಾಪ್ಟರ್‌ನಲ್ಲಿ ಆಗಮಿಸುವರು.

ಅಲ್ಲಿಂದ ಬೆಳಿಗ್ಗೆ 11.30ಕ್ಕೆ ರಸ್ತೆ ಮಾರ್ಗವಾಗಿ 11.10ಕ್ಕೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ ಆಗಮಿಸಿ ಬೆಂಗಳೂರು–ಬೆಳಗಾವಿ ನಡುವಿನ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರುವರು. ಹಾಗೆಯೇ ವರ್ಚುಯಲ್ ಮೂಲಕ ಅಮೃತಸರ ಶ್ರೀಮಾತಾ ವೈಷ್ಣೋದೇವಿ ಕಟ್ರಾ ರೈಲು ನಿಲ್ದಾಣ,ನಾಗಪುರ–ಪುಣೆ ನಡುವಿನ ವಂದೇ ಭಾರತ್ ರೈಲು ಸೇವೆಗೂ ಚಾಲನೆ ನೀಡುವರು. ಇದಾದ ಬಳಿಕ ಬೆಳಿಗ್ಗೆ 11.30ಕ್ಕೆ ರಸ್ತೆ ಮೂಲಕ ಆರ್‌ವಿ ರಸ್ತೆಯ ರಾಗಿಗುಡ್ಡ ಮೆಟ್ರೊ ನಿಲ್ದಾಣಕ್ಕೆ ಆಗಮಿಸಿ ಮೆಟ್ರೊ ಹಳದಿ ಮಾರ್ಗ ಉದ್ಘಾಟಿಸಿ ಮೆಟ್ರೊ ರೈಲಿನಲ್ಲಿ ಎಲೆಕ್ಟ್ರಾನಿಕ್ ಸಿಟಿಯವರೆಗೂ ಸಂಚರಿಸುವರು.

ಎಲೆಕ್ಟ್ರಾನಿಕ್ ಸಿಟಿಯ ಐಐಐಟಿ ಸಭಾಂಗಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಮೆಟ್ರೊ 3ನೇ ಹಂತಕ್ಕೆ ಶಂಕುಸ್ಥಾಪನೆ ನೆರವೇರಿಸಿ ಕಾರ್ಯಕ್ರಮದಲ್ಲಿ ಮಾತನಾಡಿ ಮಧ್ಯಾಹ್ನ ನವದೆಹಲಿಗೆ ವಾಪಸ್ ಆಗುವರು.

ಪ್ರಧಾನಿ ಮೋದಿ ಅವರ ಆಗಮನ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರು ಕೆಲ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ನಿರ್ಬಂಧ ಹೇರಿದ್ದು, ಕೆಲ ರಸ್ತೆಗಳಲ್ಲಿ ವಾಹನ ಸಂಚಾರ ಮಾರ್ಪಾಟನ್ನು ಮಾಡಿದ್ದಾರೆ.

ಪ್ರಧಾನಿ ನರೇಂದ್ರಮೋದಿ ಅವರು ಸಂಚರಿಸುವ ಮಾರ್ಗದಲ್ಲಿ ಅವರಿಗೆ**(2ನೇಪುಟಕ್ಕೆ)**

## ಮೂರುಕೋಟಿ ವೆಚ್ಚದಲ್ಲಿ ನೂತನ ವಕೀಲರ ಸಂಘದ ಭವನ ಲೋಕರ್ಪಣೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.09**– ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ನ್ಯಾಯಾಂಗ ಲೋಕೋಪಯೋಗಿ ಇಲಾಖೆ ತಾ.ವಕೀಲರ ಸಂಘ ಸಂಯುಕ್ತಾಶ್ರಯದಲ್ಲಿ 2022–23 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ 3ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ನೂತನ ವಕೀಲರ ಭವನದ ಕಟ್ಟಡವನ್ನು ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ರಾಯಚೂರು ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಎಂ.ಜಿ.ಎಸ್.ಕಮಾಲ್ ರವರು ಉದ್ಘಾಟಿಸಿ ಮಾತನಾಡಿ, ಈ ಕಟ್ಟಡವು ಕೇವಲ ವಕೀಲರ ಭವನದ ಕಟ್ಟಡವಾಗಿರದೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಭವನವಾಗಬೇಕು ಮಾನ್ವಿ ನ್ಯಾಯಾಲಯವು ಶತಮಾನವನ್ನು ಕಂಡಿದ್ದು ನ್ಯಾಯಾಲಯದಲ್ಲಿ 50 ವರ್ಷಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿದ ಅನೇಕ ಹಿರಿಯ ನ್ಯಾಯಾಧೀಶರಿದ್ದು ಅವರು ಮುಂದೆ ಬರುವ ಪಿಳಿಗೆಗೆ ಸ್ಪೂರ್ತಿಯಾಗಿದ್ದಾರೆ. ವಕೀಲರಾಗಿ, ನ್ಯಾಯಾಮೂರ್ತಿಯಾಗಿ ಕಕ್ಷಿದಾರರಾಗಿ ಯಾವುದೇ ಸಂಬಂಧವಿಲ್ಲದೆ ಇರುವ ಸಾಮಾನ್ಯ ವ್ಯಕ್ತಿಯಾಗಿ ಸಮಾಜವನ್ನು ನೋಡುವುದೆ ಬೇರೆಯಾಗಿರುತ್ತದೆ ಪ್ರತಿಯೊಂದಕ್ಕೂ ಒಂದಕೊಂದು ಸಂಬಂದವಿರುತ್ತದೆ ಮಾನಷ್ಯನಿಗೆ ಊಟ,ಬಟ್ಟೆ,ಮನೆ ಈ ಅವಶ್ಯಕತೆ ಮೀರಿದ ನಂತರ ಜೀವನದಲ್ಲಿ ಇರುವುದೆ ವೈಯುಕ್ತಿಕ ಅವಶ್ಯಕತೆಗಳಾದ ಹಣಕಾಸು, ವ್ಯಾಪಾರ,ಆಸ್ತಿಯನ್ನು ಕಾಪಾ ಡಿಕೊಳ್ಳುವ ವಿಷಯಗಳು, ಕುಟುಂಬ ದಲ್ಲಿನ ವಿವಾಹ,ಜೀವನಾಂಶ,ಮಕ್ಕಳನ್ನು ಸುರ್ಪದಿಗೆ ಪಡೆದುಕೊಳ್ಳುವುದು ಸೇರಿದ ಂತೆ ಮನುಷ್ಯ ಪ್ರಪಂಚದಲ್ಲಿ ಜೀವಂತವಾಗಿ ರಬೇಕಾದರೆ ಈ ಎಲ್ಲಾ ವಿಷಯಗಳಿಗೆ ಸ್ಪಂದಿಸುವ ಏಕೈಕ ಸಂಸ್ಥೆ ನ್ಯಾಯಾಂಗ ಸಂಸ್ಥೆಯಾಗಿದೆ ಕೇವಲ ವಕೀಲರಿಗೆ, ನ್ಯಾಯಾಧೀಶರಿಗೆ ಮಾತ್ರ ಸಂಬಂದಿಸಿದಲ್ಲ ಪ್ರತಿಯೊಬ್ಬರದಾಗಿದೆ. ಪ್ರತಿಯೊಂದು ವ್ಯಾಜ್ಯದಲ್ಲಿ ಕೂಡ ಕಾನೂನು ಸೇರಿಕೊಂ ಡಿರುತ್ತದೆ. ಪ್ರತಿಯೊಂದು ಕಾಯ್ದೆ ಕೂಡ ಅನೇಕ ವಿಧಗಳಲ್ಲಿ ಬಳಸಲ್ಪಡುತ್ತದೆ. ಅವುಗಳನ್ನು ಬಳಕೆ ಮಾಡುವ ಕೌಶಲ್ಯವ ನ್ನು ವಕೀಲರು ಕಲಿಯುವ ಅವಶ್ಯಕತೆ ಇರುತ್ತದೆ.ಇಂದಿನ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕೃತಕ ಬುದ್ದಿಮತ್ತೆ ತಂತ್ರಜ್ಞಾನದ ಬಳಕೆ ಹೆಚ್ಚಾಗಿದ್ದು ಇಂತಹ ತಂತ್ರಜ್ಞಾನದ ಬಳಸಿಕೊಳ್ಳುವ ಮೂಲಕ ಕಕ್ಷಿದಾರರಿಗೆ ನ್ಯಾಯವನ್ನು ಒದಾಗಿಸಿಕೊಡಬಹುದು. ರಾಜ್ಯದಲ್ಲಿನ ಅನೇಕ ಕಾರಗೃಹಗಳಲ್ಲಿ ಇಂದಿಗೂ ಕೂಡ ಕುಟುಂಬದವರಿಂದ ದೂರವಾಗಿ, ಯಾವು ದೇ ಕಾನೂನಿನ ನೇರವಿಲ್ಲದೆ ವಿಚಾರಣಾ ದೀನ ಕೈದಿಗಳಾಗಿ ತಮ್ಮಗೆ ದೊರೆಯುವ ಶಿಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಾರಗೃಹ ದಲ್ಲಿ ಕಳೆಯುತ್ತಿರುವವರಿದ್ದಾರೆ ಅಂತಹವರಿಗೂ ಕೂಡ ಕಾನೂನಿನ ನೇರವು ನೀಡಬೇಕು ಎನ್ನುವ ಉದ್ದೇಶದಿಂದ ಅಂತಹ ವಿಚಾರಣಾದೀನ ಕೈದಿಗಳಿಗಾಗಿ ಅಮಿಕಸ್ ಕ್ಯೂರಿಗಳ ನೇಮಕಗೊಳಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದ್ದೆ. ವಕೀಲರ ಸಂಘವು ಕೂಡ ಅಂತಹವರನ್ನು ಗುರುತಿಸಿ ಕಾನೂನಿನ ನೇರವು ನೀಡುವ ಕಾರ್ಯವನ್ನು ಕೈಗೊಳ್ಳುವುದರಿಂದ ಅನುಕೂಲವಾಗುತ್ತದೆ ವಕೀಲರ ಸಂಘದ ಕಟ್ಟಡದಲ್ಲಿ ಕಿರಿಯ ನ್ಯಾಯಾವಾಧಿಗಳಿಗೆ ಹಿರಿಯ ನ್ಯಾಯಾವಾಧಿಗಳು ಹಾಗೂ ಸಂಪನ್ಮೂಲ ವ್ಯಾಕ್ತಿಗಳಿಂದ ನ್ಯಾಯಮೂರ್ತಿಗಳಿಂದ ಕಾನೂನು ವಿಷಯ ಕುರಿತು ಕಾರ್ಯಗಾರಗಳನ್ನು ನಡೆಸುವ ಮೂಲಕ ವಕೀಲರು ಜ್ಞಾನವನ್ನು ಹೆಚ್ಚಿಸಿ ಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಮಾತನಾಡಿ ಸಂವಿಧಾನ ಬದ್ದವಾಗಿ ಸಿಗಬೇಕಾದ **(2ನೇಪುಟಕ್ಕೆ)**

## ನೂಲಿಯ ಚಂದಯ್ಯ ಜಯಂತಿ ಆಚರಣೆ: ಕಾಯಕ ತತ್ವಕ್ಕೆ ಒತ್ತು



**ಯುವ ಮಾರ್ಗ ಸುದ್ದಿ**

**ದೇವದುರ್ಗ,ಆ.09**– ದೇವದುರ್ಗ ಕನ್ನಡ ಸಾಹಿತ್ಯ ಪರಿಷತ್ತು ಪಟ್ಟಣದ ಸಾರ್ವಜನಿಕ ಕ್ಲಬ್ ಮೈದಾನದಲ್ಲಿ ಹಠ ಯೋಗಿ ನಿಜಶರಣ ನೂಲಿಯ ಚಂದಯ್ಯ ಅವರ ಜಯಂತಿಯನ್ನು ಆಚರಿಸಿತು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ನಾಗಪ್ಪ ನಾಡದಾಳ ಅವರು ಚಂದಯ್ಯನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಕನ್ನಡ ಉಪನ್ಯಾಸಕರಾದ ರಮೇಶ್ ಭಜಂತ್ರಿ, 12ನೇ ಶತಮಾನದ ಶ್ರೇಷ್ಠ ಶರಣರಲ್ಲಿ ನೂಲಿಯ ಚಂದಯ್ಯ ನವರೂ ಒಬ್ಬರು ಎಂದು ಹೇಳಿದರು. ಕಾಯಕ ತತ್ವದ ಮಹತ್ವವನ್ನು ಸಮಾಜಕ್ಕೆ ಸಾರಿದ ಅವರು, ತಮ್ಮ ವಚನಗಳ ಮೂಲಕ ಜಾತಿ, ಧರ್ಮ, ಲಿಂಗ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಗಳ ನಿರ್ಮೂಲನೆಗೆ ಕರೆ ನೀಡಿದರು ಎಂದರು. ಶರಣರು ಪ್ರತಿಪಾದಿಸಿದ ಕಾಯಕ ಪರಂಪರೆ ಮತ್ತು ಮೌಲ್ಯಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಅವರು ಅಭಿಪ್ರಾಯಪಟ್ಟರು.**(2ನೇಪುಟಕ್ಕೆ)**

## ಅಧಿಕ ಮಳೆ: ತೊಗರಿ ಬೆಳೆ ಹಾನಿ

**ಕಲಬುರಗಿ,ಆ.9**–ಜಿಲ್ಲೆಯ ಹಲವೆಡೆ ಅಧಿಕ ಮಳೆಯಿಂದಾಗಿ ತೊಗರಿ ಬೆಳೆ ಹಾನಿಯಾಗಿದೆ. ಬಿತ್ತನೆಯಾದ ಒಟ್ಟಾರೆ ಪ್ರದೇಶದಲ್ಲಿ ಶೇ.50 ರಷ್ಟು ಬೆಳೆ ಹಾನಿಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ತಿಳಿಸಿದ್ದಾರೆ.

ತೊಗರಿ ಕಣಜ ಎಂದೇ ಕರೆಯಲ್ಪಡುವ ಕಲಬುರಗಿ ಜಿಲ್ಲೆಯಲ್ಲಿ ಈ ಬಾರಿ ತೊಗರಿ ಇಳುವರಿ ಕಡಿಮೆಯಾಗುವ ಸಾಧ್ಯತೆಗಳಿಗೆ ಎಂದು ಅವರು ತಿಳಿಸಿದ್ದಾರೆ. ಬೆಳೆ ಹಾನಿಯಾದ ಪ್ರದೇಶಗಳಿಗೆ ಕೃಷಿ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು



ಅವರು ಆಗ್ರಹಿಸಿದ್ದಾರೆ.

ಬೆಳೆ ಹಾನಿಯ ಸಮೀಕ್ಷೆ ನಡೆಸುವುದರ ಮೂಲಕ ಬೆಳೆಹಾನಿಯಾದ ರೈತರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ನೆರವಿಗೆ ಪೊಲೀಸರಿಗೆ ಕರೆ ಮಾಡಿ



**ಬೀದರ್,ಆ.09**–ಮಕ್ಕಳು ಯಾವುದೇ ಅಪಾಯ ಅಥವಾ ತುರ್ತು ಸಂದರ್ಭಗಳಲ್ಲಿ ನೆರವಿಗಾಗಿ ಮಕ್ಕಳ ಸಹಾಯವಾಣಿ ಸಂಖ್ಯೆ 1098, ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 100 ಇಲ್ಲವೇ ತುರ್ತು ಸೇವೆ ಸಂಖ್ಯೆ 112 ಗೆ ಕರೆ ಮಾಡಬೇಕು ಎಂದು ಬೀದರ್ ಡಿವೈಎಸ್‌ಪಿ ಶಿವನಗೌಡ ಪಾಟೀಲ ಹೇಳಿದರು.

ನಗರದ ನೌಬಾದ್–ಚೊಂಡಿ ರಸ್ತೆಯಲ್ಲಿ ಇರುವ ದಿ ಇನ್ಫಿನಿಟಿ ಶಾಲೆಯಲ್ಲಿ ಅಕ್ಕ ಪಡೆ ವತಿಯಿಂದ ಗುರುವಾರ ನಡೆದ ಮಕ್ಕಳ ಸುರಕ್ಷತೆ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಮಕ್ಕಳು ಮತ್ತು ಸಾರ್ವಜನಿಕರ ರಕ್ಷಣೆ ಹಾಗೂ ಸುರಕ್ಷತೆಯೇ ಪೊಲೀಸ್ ಇಲಾಖೆಯ ಆದ್ಯತೆಯಾಗಿದೆ ಎಂದು ತಿಳಿಸಿದರು.

ಮಕ್ಕಳು ಉತ್ತಮ ಸ್ಪರ್ಶ, ಕೆಟ್ಟ ಸ್ಪರ್ಶದ ಬಗ್ಗೆ ಅರಿವು ಹೊಂದಬೇಕು. ಅನಾವಶ್ಯಕ ಸ್ಪರ್ಶವಾದರೆ ಕೂಡಲೇ ಶಿಕ್ಷಕರು ಹಾಗೂ ಪಾಲಕರ ಗಮನಕ್ಕೆ ತರಬೇಕು. ರಸ್ತೆ ದಾಟುವಾಗ ಸುರಕ್ಷತಾ ನಿಯಮ ತಪ್ಪದೆ ಪಾಲಿಸಬೇಕು ಎಂದು ಹೇಳಿದರು.

ತಂತ್ರಜ್ಞಾನ ಯುಗದಲ್ಲಿ ಸಾಮಾಜಿಕ ಜಾಲತಾಣ, ಇಂಟರ್ನೆಟ್ ಬಳಕೆ ಸಂದರ್ಭದಲ್ಲಿ ಎದುರಾಗುವ ಅಪಾಯ, ಮೋಸದ ಕರೆ, ಹ್ಯಾಕಿಂಗ್ ಮುಂತಾದ ಸೈಬರ್ ಅಪರಾಧಗಳ ಬಗ್ಗೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಶಾಲೆಯ ಒಳಗೆ ಹಾಗೂ ಹೊರಗೆ ಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಳ್ಳುವುದು ಬಹಳ ಅವಶ್ಯಕ ಎಂದು ಅಕ್ಕ ಪಡೆಯ ಎಎಸ್‌ಐ ಸಂಗೀತಾ ಹೇಳಿದರು.

ಸಂಟಕದ ಸಂದರ್ಭದಲ್ಲಿ ಮಕ್ಕಳು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬೇಕು ಎನ್ನುವುದನ್ನೂ ಅವರು ವಿವರಿಸಿದರು.

ಕಾರ್ಯಕ್ರಮವು ಮಕ್ಕಳಲ್ಲಿ ವಿವಿಧ ವಿಷಯಗಳ ಕುರಿತು ತಿಳಿವಳಿಕೆ ಮೂ ಡಿಸಲು ನೆರವಾಗಿದೆ ಎಂದು ದಿ ಇನ್ಫಿನಿಟಿ ಸ್ಕೂಲ್ ಟ್ರಸ್ಟಿ ಲಕ್ಷ್ಮಿ ಮುಗಳಿ ತಿಳಿಸಿದರು.

ಅಕ್ಕ ಪಡೆಯ ಸುಜಾತಾ ದೇವಿ, ಶೋಭಾ, ಭಾರತಿ, ಶಾಲೆಯ ಪ್ರಾಚಾರ್ಯೆ ಡಾ. ಮೆಲ್ವಿನ್ ಬಾಬಿ ಮರ್ಜೆ, ಉಪ ಪ್ರಾಚಾರ್ಯೆ ಪ್ರಾಪ್ತಿ ನಾಯಕ್, ಶಾಲೆಯ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ಸ್ವಾತಂತ್ರ್ಯ ದಿನಾಚರಣೆ ಹಾಗೂ ವಿವಿಧ ಜಯಂತಿ ಪೂರ್ವಭಾವಿ ಸಭೆ




**ಯುವ ಮಾರ್ಗ ಸುದ್ದಿ**

**ಸಿರವಾರ.ಆ.09**– ದೇಶವೆ ಆಚರಣೆ ಮಾಡುವ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರೊಯಾಗಿ, ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು, ವಿವಿಧ ಜಯಂತಿಗಳನ್ನು ಗೌರವ ಪೂರ್ವಕವಾಗಿ ಆಚರಣೆ ಮಾಡಬೇಕು, ನಿರ್ಲಕ್ಷ ವಹಿಸಿದರೆ ಕ್ರಮಕ್ಕೈಗೊಳಲಾಗುವುದು ಎಂದು ತಹಸೀ ಲ್ದಾರ ಅಶೋಕ ಪವಾರ ಹೇಳಿದರು.

ಪಟ್ಟಣದ ತಹಸೀಲ್ದಾರ ಕಛೇರಿಯಲ್ಲಿ ಶುಕ್ರವಾರ 15-08-2025 ರಂದು ಸ್ವಾತಂತ್ರ್ಯ ದಿನಾಚರಣೆ ಮತ್ತು 16-8-2025 ರಂದು ಶ್ರೀಕೃಷ್ಣ ಜಯಂತಿ ಯ ಪೂರ್ವಭಾವಿಯ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು ವಿವಿಧ ಮಹಾನ್ ವ್ಯಕ್ತಿಗಳ ಜಯಂತಿಗಳ ನ್ನು ಅವರ ಭಾವ ಚಿತ್ರಗಳಿಗೆ ಪೂಜೆ ಸಲ್ಲಿಸಿ ಅವರ ಆದರ್ಶಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಆಚರಣೆ ಮಾಡಬೇಕು. ಶಾಲೆ,ಕಾಲೇಜು, ಸರ್ಕಾರಿ ಕಛೇರಿಗಳಲ್ಲಿ ತಪ್ಪದೆ ಆಚರಣೆ ಮಾಡಬೇಕು. ದೇಶಕ್ಕೆ ಸ್ವಾತಂತ್ರ್ಯ ದಿನವಾದ ಅಗಸ್ಟ್ 15 ಪ್ರತಿಯೊಂದು ಸರ್ಕಾರಿ ಕಛೇರಿ ಶಾಲೆ,ಕಾಲೇಜುಗಳಲ್ಲಿ ತಪ್ಪದೆ ಮಹಾತ್ಮ ಗಾಂಧಿಜಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಭಾವಚಿತ್ರಗಳನ್ನು ಇಟ್ಟು ಪೂಜೆಸಲಿಸಿ, ಧ್ವಜಾರೋಹಣ ಮಾಡಬೇಕು. ಎರಡು ಸಮಾನವಾದ ಭಾವಚಿತ್ರಗಳ ಇಡಬೇಕು. ಕಲರ್ ಪ್ರತಿಗಳನ್ನು ಇಡಬಾರದು, ನಿರ್ಲಕ್ಷ ವಹಿಸಿದ ಅದಿಕಾರಿಗಳ ವಿರುದ್ದ ಕ್ರಮಕ್ಕೆ ಗೊಳಲಾಗುವುದು. ಎಲ್ಲಾ ಅದಿಕಾರಿಗಳು ತಮ್ಮ ತಮ್ಮ ಇಲಾಖೆಯಲ್ಲಿ ಧ್ವಜಾರೋಹಣ ಮಾಡಿ ನಂತರ ತಾಲೂಕ ಆಡಳಿತದಿಂದ ಹಮ್ಮಿಕೊಂಡಿರುವ **(2ನೇಪುಟಕ್ಕೆ)**

## ಮೊದಲನೇಯ ಪುಟದಿಂದ

# ಇಂದು ಬೆಂಗಳೂರಿಗೆ ಮೋದಿ

ಭವ್ಯಸ್ವಾಗತ ಕೋರಲು ಬಿಜೆಪಿ ಕಾರ್ಯಕರ್ತರು ಸಿದ್ಧತೆ ನಡೆಸಿದ್ದು, ಬೆಂಗಳೂರಿನ ಮೇಖ್ರಿ ವೃತ್ತ, ಚಾಲುಕ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್‌ಎಂಡ್ ವೃತ್ತ, ರಾಗಿ ಗುಡ್ಡ, ಎಲೆಕ್ಟ್ರಾನಿಕ್ ಸಿಟಿ ಮೆಟ್ರೊ ನಿಲ್ದಾಣಗಳ ಬಳಿ ಹಾಗೂ ಹಳದಿ ಮಾರ್ಗದ 16 ನಿಲ್ದಾಣಗಳಲ್ಲೂ ಬಿಜೆಪಿಯ ನೂರಾರು ಕಾರ್ಯಕರ್ತರು ಮೋದಿ ಅವರನ್ನು ಸ್ವಾಗತಿಸುವರು.

ಹಳದಿ ಮಾರ್ಗ 8 ಲಕ್ಷ ಜನರಿಗೆ ಅನುಕೂಲ

ನಮ್ಮ ಮೆಟ್ರೊ ಹಳದಿ ಮಾರ್ಗದ ಉದ್ಘಾಟನೆಯಿಂದ ಸುಮಾರು 8 ಲಕ್ಷ ಮೆಟ್ರೊ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಅಲ್ಲದೆ ಸಿಲ್ಕ್‌ಬೋರ್ಡ್ ಸೇರಿದಂತೆ ಎಲೆಕ್ಟ್ರಾನಿಕ್ ಸಿಟಯವರೆಗಿನ ಸಂಚಾರ ದಟ್ಟಣೆ ಸಮಸ್ಯೆಗೂ ಇದರಿಂದ ಬಹುಮಟ್ಟಿಗೆ ಪರಿಹಾರ ಸಿಗಲಿದೆ.ಆರಂಭದಲ್ಲಿ ಪ್ರತಿ ಅರ್ಧ ಗಂಟೆಗೆ ಒಂದು ಮೆಟ್ರೊ ರೈಲು ಹಳದಿ ಮಾರ್ಗದಲ್ಲಿ ಸಂಚರಿಸಲಿದೆ. ರೈಲು ಬೋಗಿಗಳನ್ನು ಹೆಚ್ಚಾಗಿ ತರಿಸಿಕೊಂಡ ನಂತರ ಈ ಮಾರ್ಗದಲ್ಲೂ ಮೆಟ್ರೊ ರೈಲು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡಲಿದೆ.

ಹಳದಿ ಮಾರ್ಗ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೂ ಇರಲಿದ್ದು, 16 ನಿಲ್ದಾಣಗಳು ಈ ಮಾರ್ಗದಲ್ಲಿ ಇವೆ. ಈ ಮಾರ್ಗದ ಉದ್ದ ಸುಮಾರು 19 ಕಿ.ಮೀ ಇದೆ.ಹಳದಿ ಮಾರ್ಗದ ಉದ್ಘಾಟನೆಯಿಂದ ಬೆಂಗಳೂರಿನಲ್ಲಿ ಮೆಟ್ರೊ ಜಾಲ 96 ಕಿ.ಮೀ.ಗೆ ವಿಸ್ತಾರವಾಗಲಿದೆ. ಹಳದಿ ಮಾರ್ಗದಲ್ಲಿ ಕನಿಷ್ಠ ದರ 10 ರೂ. ಇದ್ದು, ಗರಿಷ್ಠ ದರ 60 ರೂ.ಆಗಿದೆ.ಬಹು ಬೇಡಿಕೆಯ ಬೆಂಗಳೂರು–ಬೆಳಗಾವಿ ವಂದೇ ಭಾರತ್ ರೈಲಿನ ಓಡಾಟದಿಂದ ರಾಜಧಾನಿ ಬೆಂಗಳೂರಿಗೆ ಕಲ್ಯಾಣ ಕರ್ನಾಟಕದಿಂದ ಸಂಪರ್ಕ ಜಾಲ ಮತ್ತಷ್ಟು ಹೆಚ್ಚಾದಂತಾಗಿದೆ.

ಪ್ರಧಾನಿ ಮೋದಿ ಉದ್ಘಾಟಿಸಲಿರುವ ಬೆಂಗಳೂರು–ಬೆಳಗಾವಿ ವಂದೇ ಭಾರತ್ ರೈಲು ಬುಧವಾರ ಹೊರತುಪಡಿಸಿ ವಾರದ ಎಲ್ಲ ದಿನ ಸಂಚರಿಸಲಿದೆ.ಪ್ರತಿದಿನ ಬೆಳಿಗ್ಗೆ 5.20ಕ್ಕೆ ಬೆಳಗಾವಿಯಿಂದ ಹೊರಡುವ ವಂದೇ ಭಾರತ್ ರೈಲು ಮಧ್ಯಾಹ್ನ 1.50ಕ್ಕೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಬರಲಿದೆ.ಮಧ್ಯಾಹ್ನ 2.20ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಹೊರಡುವ ವಂದೇ ಭಾರತ್ ರೈಲು ರಾತ್ರಿ 10.40ಕ್ಕೆ ಬೆಳಗಾವಿ ತಲುಪಲಿದೆ.

ಈ ವಂದೇ ಭಾರತ್ ರೈಲು ಯಶವಂತಪುರ, ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಧಾರವಾಡದಲ್ಲಿ ನಿಲುಗಡೆಯಾಗಲಿದೆ.ವಂದೇ ಭಾರತ್‌ನ 2ನೇ ರೈಲು ಆ.10 ರಂದು ಬೆಳಗ್ಗೆ 11 ಗಂಟೆಗೆ ಪ್ರಧಾನಿ ಮೋದಿ ಅವರು ಬೆಂಗಳೂರಿನಲ್ಲಿ ಚಾಲನೆ ನೀಡಲಿದ್ದಾರೆ.ಪ್ರಧಾನಿ ಜತೆ ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ಅವರು ಉಪಸ್ಥಿತರಿರುವರು. ಈ ವಂದೇ ಭಾರತ್ ರೈಲುಗಾಡಿ ತುಮಕೂರಿಗೆ 11.45ಕ್ಕೆ ಆಗಮಿಸಲಿದ್ದು, ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ರಾಷ್ಟ್ರಧ್ವಜ ಹಿಡಿದು ಸ್ವಾಗತಿಸುವಂತೆ ಮಾಜಿ ಸಂಸದರಾದ ಜಿ.ಎಸ್.ಬಸವರಾಜು ಅವರು ಮನವಿ ಮಾಡಿದ್ದಾರೆ.

# ಮೂರುಕೋಟಿ ವೆಚ್ಚದಲ್ಲಿ ನೂತನ ವಕೀಲರ ಸಂಘದ ಭವನ ಲೋಕರ್ಪಣೆ

ನ್ಯಾಯ ನ್ಯಾಯಾಲಯದಿಂದ ಮಾತ್ರ ದೇಶದ ಎಲ್ಲಾರಿಗೂ ಕೂಡ ದೊರೆಯುವುದಕ್ಕೆ ಸಾಧ್ಯ ಜನಸಾಮಾನ್ಯರಿಗೆ ನ್ಯಾಯದೊರೆಯುವಲ್ಲಿ ವಕೀಲರ ಪಾತ್ರ ಮಹಾತ್ವದಾಗಿರುತ್ತದೆ ಎನ್ನುವ ಉದ್ದೇಶದಿಂದ ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ ನ್ಯಾಯಾಲಯಗಳಿಗೂ ಕೂಡ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ರಾಜ್ಯದ ಕಾನೂನು ಸಚಿವರಾದ ಹೆಚ್.ಕೆ.ಪಾಟೀಲ್ ರವರು ಕಾರ್ಯನಿರ್ವಹಿಸುತ್ತಿದ್ದಾರೆ ರಾಯಚೂರು ಜಿಲ್ಲಾ ನ್ಯಾಯಾಲಯಕ್ಕೆ ಅಗತ್ಯವಿರುವ ಕಟ್ಟಡಗಳನ್ನು ಕೂಡ ಮಂಜೂರು ಮಾಡಿ 2ಕೋಟಿ ಅನುದಾನವನ್ನು ನೀಡಿದ್ದಾರೆ, ಮಾನ್ವಿ ಪಟ್ಟಣದಲ್ಲಿ ನಿಜಾಮರ ಕಾಲದಲ್ಲಿನ ನೂರಾರು ವರ್ಷಗಳ ಹಿಂದಿನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಟ್ಟಡವನ್ನು 8 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ ಕಟ್ಟಡದಲ್ಲಿ ಇಂದು ಕಾರ್ಯನಿರ್ವಹಿಸುತ್ತಿದ್ದೆ ನಾನು ಶಾಸಕರಾಗಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ ಸಮಯದಲ್ಲಿ ಹಾಗೂ ರಾಜ್ಯ ಸಚಿವರಾದ ನಂತರ ರಾಜ್ಯದಲ್ಲಿನ ಎಲ್ಲಾ ವಕೀಲರ ಸಂಘದ ಭವನಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಹೆಚ್ಚಿನ ಅದ್ಯತೆ ನೀಡಿದ್ದೇನೆ. ಇಂದು ಲೋಕಪಯೋಗಿ ಇಲಾಖೆಯಿಂದ 3ಕೋಟಿ ವೆಚ್ಚದಲ್ಲಿ ನೂತನ ವಕೀಲರ ಭವನ ನಿರ್ಮಾಣ ಮಾಡಲಾಗಿದೆ. ತಾಲೂಕಿನ ವಕೀಲರ ಭವನಕ್ಕೆ ಅಗತ್ಯ ವಿರುವ ಸಾಮಾಗ್ರಿಗಳನ್ನು ಶಾಸಕರಿಂದ ಮಂಜೂರು ಮಾಡಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಾರುತಿ ಎಸ್.ಬಾಗಡೆ ಮಾತನಾಡಿ ಉತ್ತಮವಾದ ತೀರ್ಪಗಳು ಬರುವುದಕ್ಕೆ ವಕೀಲರ ಪಾತ್ರವಿರುತ್ತದೆ .ವಕೀಲರು ಹಾಗೂ ನ್ಯಾಯಾಧೀಶರು ನ್ಯಾಯಾಂಗದ ಎರಡು ಚಕ್ರಗಳಿದಂತೆ . ವಕೀಲರು ಕಕ್ಷೀದಾರರ ಭಾವನಿಗಳಿಗೆ ಸ್ಪಂದಿಸಿ ಕಾನೂನಿನ ಹೆಚ್ಚಿನ ಜ್ಞಾನವನ್ನು ಹೊಂದಿ ಪ್ರತಿಯೊಬ್ಬರಿಗೂ ಕೂಡ ನ್ಯಾಯದೊರೆಯುವಂತೆ ಮಾಡುವಲ್ಲಿ ಹೆಚ್ಚಿನ ಪಾತ್ರ ವಹಿಸುವ ಅಗತ್ಯವಿದೆ. ಹಿರಿಯ ವಕೀಲರಲ್ಲಿನ ಜ್ಞಾನವನ್ನು ,ವಾದ ಮಾಡುವ ಶೈಲಿಯನ್ನು ಕಿರಿಯ ವಕೀಲರು ಪಡೆದುಕೊಳ್ಳಬೇಕು. ಮಾನ್ವಿ ನ್ಯಾಯಾಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲು ವಿಭಾಗ,ವಿಚ್ಛೇದನ ಪ್ರಕರಣಗಳಿದ್ದು ಅವುಗಳ ತ್ವರಿತ ವೀಲೆವರಿಗೆ ಹಿರಿಯ ನ್ಯಾಯವಾಧಿಗಳು ಸಹಕಾರ ನೀಡಬೇಕು ನ್ಯಾಯಾಲಯದಲ್ಲಿ ನಡೆಯುವ ಮಧ್ಯಸ್ತಿಕೆ ಕ್ಯಾಂಪೆನ್‌ಗಳ ಮೂಲಕವು ವ್ಯಾಜ್ಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ತಿಳಿಸಿದರು.

ತಾ.ವಕೀಲರ ಸಂಘದ ಅಧ್ಯಕ್ಷರಾದ ರವಿಕುಮಾರ ಪಾಟೀಲ್ ಮಾತನಾಡಿ ತಾಲೂಕಿನ ವಕೀಲರ ಸಂಘವು ಕಕ್ಷಿದಾರರಿಗೆ ನ್ಯಾಯವನ್ನು ದೊರಕಿಸಿಕೊಡುವುದರ ಜೊತೆಗೆ ಅನೇಕ ಸಮಾಜಿಕ ಕಾರ್ಯಗಳನ್ನು ಮಾಡುತ್ತ ಬಂದಿದೆ ಈ ಸಾಲಿನಿಂದ ಮೃತ ವಕೀಲರ ಸಂಘದ ಸದಸ್ಯರ ಕುಟುಂಬಕ್ಕೆ ನೇರವು ನೀಡುವುದಕ್ಕಾಗಿ ವಕೀಲರ ಕಲ್ಯಾಣ ನಿಧಿಯನ್ನು ಪ್ರಾರಂಭಿಸಿ 50 ಸಾವಿರ ಪರಿಹಾರವನ್ನು ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಲಯದ ಹಿರಿಯ ನ್ಯಾಯಾಧೀಶರಾದ ಶಿವರಾಜ ವಿ.ಸಿದ್ದೇಶ್ವರ ಹಾಗೂ ಕಿರಿಯ ಶ್ರೇಣಿ ನ್ಯಾಯಾಧೀಶರಾದ ಆನಂದ ಹೆಚ್.ಕೊಣ್ಣುರು ಮತ್ತು ವಕೀಲರ ಸಂಘದ ಪ್ರ.ಕಾರ್ಯದರ್ಶಿ ಚನ್ನಬಸವನಾಯಕ ಬಲ್ಲಟಗಿ, ಲೋಕಪಯೋಗಿ ಇಲಾಖೆಯ ಅಭಿಯಂತರಾದ ವೆಂಕಟೇಶ ಗಲ್ಲಗ್, ಸೇರಿದಂತೆ ಜಿಲ್ಲೆಯ ವಿವಿಧ ನ್ಯಾಯಾಲಯಗಳ ನ್ಯಾಯಾಧಿಶರು,ವಕೀಲರ ಸಂಘದ ಪದಾಧಿಕಾರಿಗಳು,ನ್ಯಾಯಾವಾದಿಗಳು,ಸಿಬ್ಬಂದಿಗಳು ಇದ್ದರು.

# ನೂಲಿಯ ಚಂದಯ್ಯ ಜಯಂತಿ ಆಚರಣೆ: ಕಾಯಕ ತತ್ವಕ್ಕೆ ಒತ್ತು

ಈ ಸಂದರ್ಭದಲ್ಲಿ ದೇವದುರ್ಗ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಚ್. ಶಿವರಾಜ್, ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರಾದ ಟಿ. ರಂಗನಾಥ ಚಲವಾದಿ, ಗುಂಡಪ್ಪ ನಾಯಕ ಮಜ್ಜಿಗಿ, ಸಾಬಯ್ಯ ನಾಯಕ ಮಜ್ಜಿಗೆ, ಚನ್ನಬಸವ ರಂಗನಾಥ್, ಮೌನೇಶ್ ಭಜಂತ್ರಿ, ರಾಮಣ್ಣ ಭಜಂತ್ರಿ, ಚನ್ನಬಸವ ಭೀಮಣ್ಣ ಭಜಂತ್ರಿ, ಮಲ್ಲೇಶ್ ಶಿವರಾಜ್ ರುದ್ರಾಕ್ಷಿ, ಸಹಕಾರ ದರ್ಶಿ ಕನ್ನಡ ಸಾಹಿತ್ಯ ಪರಿಷತ್ತಿನ ನಾಗರಾಜ್ ಮಸ್ಕಿ ಸೇರಿದಂತೆ ಹಲವು ಗಣ್ಯರು, ಸಂಘ ಸಂಸ್ಥೆಗಳ ಮುಖಂಡರು, ಸಾಹಿತ್ಯಾಸಕ್ತರು ಹಾಗೂ ಪಟ್ಟಣದ ಹಿರಿಯ ನಾಗರಿಕರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ದಿನಾಚರಣೆ ಹಾಗೂ ವಿವಿಧ ಜಯಂತಿ ಪೂರ್ವಭಾವಿ ಸಭೆ

ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡಲಾಗುವುದು. ಸ್ವಾತಂತ್ರ್ಯ ದಿನಾಚರಣೆ ವಿವಿಧ ನಾಮಪಲಕಗಳಿಗೆ, ವೃತ್ತಗಳಿಗೆ ದೀಪಾಲಾಂಕರ ಮಾಡಬೇಕು. ಪ.ಪಂಚಾಯತಿ ವಾರ್ಡ ನಂ 12 ಉಪಚುನಾವಣೆ ಇರುವುದರಿಂದ ಬಾಲಕೀಯರ ಪ್ರೌಡಶಾಲೆಯ ಅವರಣದ ಬದಲಾಗಿ, ಬಾಲಕರ ಪ್ರೌಢಶಾಲೆ ಕಾರ್ಯಕ್ರಮ ಆಯೋಜನೆ ಬಗ್ಗೆ ಸ್ಥಳ ವಿಕ್ಷಣೆ ಮಾಡಿ ತಿಳಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸರ್ಕಾರಿ ನೌಕರ ಸಂಘದ ಅದ್ಯಕ್ಷ ಆರಿಪ್ ಮಿಯಾ, ಖಜಾನೆಇಲಾಖೆಯ ಅದಿಕಾರಿ ಶಂಕ್ರಮ್ಮ, ಪಿಎಸ್ ಐ ಅಮರೇಗೌಡ, ಜೇಸ್ಕಾಂ ಪ್ರಭಾರಿ ಎಇಇ ಮೋಹನ್ ಸಿಂಗ್, ಡಾ ಅಭಿಷೇಕ ಪಾಟೀಲ್. ಸಿಆರ್ ಸಿ ದಿವಾಕರ, ಮಹೇಶ, ಎಪ್ ಡಿ ಎ ಈರೇಶ, ವಿ ಎ ವಿಲ್ಸನ್, ಮುಖಂಡರಾದ ಡಿ.ಯಮನೂರು, ಶಂಕರ ಮರಾಟ, ಶಾಂತಪ್ಪ ಪಿತಗಲ್, ಹುಲ್ಲಿಗೆಪ್ಪ ಮಡಿವಾಳ, ಹನುಮಂತ, ನಾಗರಾಜ, ಪ್ರಕಾಶ ಸೇರಿದಂತೆ ಇನ್ನಿತರರು ಇದರು

# ವೃಕ್ಷದೊಂದಿಗೆ ರಕ್ಷಾ ಬಂಧನ ಆಚರಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.09–** ಪ್ರತಿ ಶೈಕ್ಷಣಿಕ ವರ್ಷದಲ್ಲಿ ಶೈಕ್ಷಣಿಕ ಕಲಿಕಾ ಪ್ರಗತಿಯೊಂದಿಗೆ ಪಠ್ಯತರ ಚಟುವಟಿಕೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ತಮ್ಮ ಘಟಕಗಳಲ್ಲಿ ಅನೇಕ ಜೀವನ ಕೌಶಲ್ಯ ವಿಷಯಗಳನ್ನು ಕಲಿಯುತ್ತಾರೆ. ಅದೇ ರೀತಿ ಪ್ರತಿಯೊಂದು ಹಬ್ಬ ಹರಿದಿನಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅದರಂತೆ ಮಾನ್ವಿ ಸ್ಥಳೀಯ ಸಂಸ್ಥೆಯ ಮಾನ್ವಿ ಪಬ್ಲಿಕ್ ಸ್ಕೂಲ್ ಕಬ್ ಬುಲ್ಬುಲ್ ಸ್ಕೌಟ್ ಗೈಡ್ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿಯ ಗಿಡಮರಗಳಿಗೆ, ಸಸ್ಯಗಳಿಗೆ ರಾಖಿರಕ್ಷೆಯನ್ನು ಕಟ್ಟಿ ಅವುಗಳ ಪಾಲನೆ ಪೋಷಣೆಗಳ ಜವಾಬ್ದಾರಿಗಾಗಿ ಪಣ ತೊಟ್ಟರು. ಅಲ್ಲವೇ ಅವುಗಳನ್ನು ತಾವುಗಳು ಶಾಲೆಯಲ್ಲಿ ಇರು ವವರೆಗೆ ಸರಿಯಾಗಿ ನೋಡಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದರು. ಪ್ರತಿಯೊಂದು ವಿದ್ಯಾರ್ಥಿ ಶಾಲಾ ಆವರಣದಲ್ಲಿಯ ಸಸಿ ಮರಗಳಿಗೆ ರಕ್ಷೆಯನ್ನು ಕಟ್ಟಿದರು. ಈ ಮೂಲಕ ರಕ್ಷಾಬಂಧನ ಹಬ್ಬವನ್ನು ವಿಶೇಷವಾಗಿ ಆಚರಿಸಿ ತಮ್ಮ ಪರಿಸರ ಕಾಳಜಿ ಮೆರೆದರ. ಈ ಸಂದರ್ಭದಲ್ಲಿ ಶಾಲಾ ಕಾರ್ಯದರ್ಶಿ ಸೈಯದ್ ಮುಷ್ತಪ ಖಾದ್ರಿ, ಮುಖ್ಯ ಗುರುಗಳಾದ ನಾಗರತ್ನ ದೇಸಾಯಿ, ಸ್ಕೌಟ್ ಗೈಡ್ ಜಂಟಿ ಕಾರ್ಯದರ್ಶಿ ನರಸಿಂಹಮೂರ್ತಿ ದೇಸಾಯಿ ಸೇರಿದಂತೆ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ಇತರೆ ಸಿಬ್ಬಂದಿ ಉಪಸ್ಥಿತರಿದ್ದು ಮಕ್ಕಳ ಈ ಕಾರ್ಯಕ್ರಮವನ್ನು ಶ್ಲಾಘಿಸಿದರು.

# ಮುಸ್ಲಿಂ ಮುಖಂಡರು ಬಿಜೆಪಿ ಸೇರ್ಪಡೆ



ಯುವ ಮಾರ್ಗ ಸುದ್ದಿ

**ಆಳಂದ,ಆ.09–**ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅನೇಕ ಮುಸ್ಲಿಂ ಮುಖಂಡರು ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಅವರ ನಾಯಕತ್ವವನ್ನು ಒಪ್ಪಿಕೊಂಡು ಬಿಜೆಪಿ ಸೇರ್ಪಡೆಯಾದರು.

ಇತ್ತೀಚಿಗೆ ಆಳಂದ ಪಟ್ಟಣದ ಮಟಕಿ ರಸ್ತೆಯ ವೃತ್ತದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಳಂದ ಪಟ್ಟಣದ ಬಂಗಡಿಪೀರ್, ಬಾಹೇರಪೇಠ, ಮಟಕಿ ರಸ್ತೆ, ರಜ್ವಿ ರಸ್ತೆಯ ಭಾಗದ ನೂರಾರು ಜನ ಮುಸ್ಲಿಂ ಮುಖಂಡರು ಕಾಂಗ್ರೆಸ್ ತೊರೆದು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡರು.

ಮಾಜಿ ಶಾಸಕ ಸುಭಾಷ್ ಗುತ್ತೇದಾರ ಮಾತನಾಡಿ, ಆಳಂದನಲ್ಲಿ ಶಾಸಕ ಬಿ ಆರ್ ಪಾಟೀಲ ಹೆಸರಿಗೆ ಮಾತ್ರ ಶಾಸಕರಾಗಿದ್ದಾರೆ ಆದರೆ ಅಸಲಿಗೆ ಅವರ ಅಣ್ಣನ ಮಗ ಆರ್ ಕೆ ಪಾಟೀಲ ಅಧಿಕಾರ ಚಲಾಯಿಸುತ್ತಿದ್ದು ಇದರಿಂದ ಸಾಮಾನ್ಯ ಜನ ತೊಂದರೆ ಅನುಭವಿಸುತ್ತಿದ್ದಾರೆ. ತಾಲೂಕಿನಲ್ಲಿ ವ್ಯಾಪಕ ಭ್ರಷ್ಟಾಚಾರ ಮನೆ ಮಾಡಿದೆ. ಪ್ರತಿ ಕೆಲಸಕ್ಕೆ ದುಡ್ಡು ಕೊಟ್ಟು ಕೆಲಸ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಗುತ್ತೇದಾರ ಮಾತನಾಡಿ, ಬಿಜೆಪಿ ಅಲ್ಪಸಂಖ್ಯಾತರ ವಿರೋಧಿಯಲ್ಲ. ಬಿಜೆಪಿಯ ಮೂಲಮಂತ್ರವೇ ಸರ್ವರ ಜೊತೆಗೆ ಸರ್ವರ ವಿಕಾಸ ಅದು ಎಲ್ಲರ ಪರಿಶ್ರಮದೊಂದಿಗೆ ಎಂಬುವುದಾಗಿದೆ. ಆಳಂದ ತಾಲೂಕಿನಲ್ಲಿ ಸರ್ವ ಜನರನ್ನು ಕರೆದುಕೊಂಡು ಹೋಗುವ ಶಕ್ತಿ ಕೇವಲ ಸುಭಾಷ್ ಗುತ್ತೇದಾರ ಅವರಲ್ಲಿದೆ. ಇದು ಚುನಾವಣೆಯ ಕಾಲವಲ್ಲದಿದ್ದರೂ ಅನೇಕರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ ಇದು ಮುಂದಿನ ದಿನಗಳಲ್ಲಿ ಸುನಾಮಿಯಾಗಿ ಪರಿವರ್ತನೆಯಾಗಲಿದೆ ಎಂದು ಹೇಳಿದರು.

ಮುಖಂಡ ಸಲೀಮ ಜಮಾದಾರ ಮಾತನಾಡಿ, ಶಾಸಕ ಬಿಆರ್ ಪಾಟೀಲ ಅಲ್ಪಸಂಖ್ಯಾತರನ್ನು ಕೇವಲ ವೋಟ್ ಬ್ಯಾಂಕ್‌ಗಳಿಗಾಗಿ ಬಳಸಿಕೊಂಡಿದ್ದಾರೆ. ಮುಸ್ಲಿಂರು ಕೆಲಸ ಮಾಡಿಕೊಳ್ಳಲು ಹೋದರೆ ವಾಚಾಮಗೋಚರ ಬೈಯುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಲೀಂ ಜಮಾದಾರ ನೇತೃತ್ವದಲ್ಲಿ ಫಯ್ಯಾಜ್ ಶೇಖ್, ಮನ್ಸೂರ ಶೇಖ್, ಆಸೀಫ್ ಶೇಖ್, ಸೈಯ್ಯದ್ ಝಾಕೀರ್ ಅಹ್ಮದ್, ಫಯ್ಯಾಜ್ ಪಟೇಲ್, ಸಮೀರ ಅನ್ಸಾರಿ, ಫಕ್ರುದ್ದೀನ್ ರೋತೆ, ಆಶ್ಪಾಕ್ ಮುಲ್ಲಾ, ಸಾಹೇಬಲಾಲ್, ಮಹಮ್ಮದ್ ನಿಜಾಮ್, ಇಲಿಯಾಸ್, ಅನ್ವರ್ ಭಾಷಾ, ಹೈದರಸಾಬ್, ಚಾಂದ ಪಾಶಾ, ನೂರುದ್ದೀನ್, ಮನಸೂರಸಾಬ್, ಮೆಹಬೂಬ್ ಪಾಶಾ, ಬಿಲಾವಲ್, ರುಕ್ಮೊದ್ದೀನ್, ಅಜೀಮ ಪಾಶಾ, ಜೈನುದ್ದೀನ್, ಕುತ್ಬುದ್ದೀನ್ ಸೇರಿದಂತೆ ನೂರಾರು ಮುಸ್ಲಿಂ ಮುಖಂಡರು, ಯುವಕರು ಬಿಜೆಪಿ ಬಾವುಟ ಹಿಡಿದು ಅಧಿಕೃತವಾಗಿ ಬಿಜೆಪಿ ಸೇರ್ಪಡೆಯಾದರು.

ಪಕ್ಷ ಸೇರ್ಪಡೆಗೆ ಮೊದಲು ಬಸ್ ನಿಲ್ದಾಣದಿಂದ ರಜ್ವಿ ರಸ್ತೆ ಮಾರ್ಗವಾಗಿ ಮಟಕಿ ರಸ್ತೆಯವರೆಗೆ ಜೈಘೋಷ ಕೂಗುತ್ತಾ ಬಾಜಾ ಭಜಂತ್ರಿಯೊಂದಿಗೆ ಮೆರವಣಿಗೆಯಲ್ಲಿ ಮುಖಂಡರನ್ನು ಬರ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ, ಸಂತೋಷ ಗುತ್ತೇದಾರ, ಸಿ.ಕೆ.ಪಾಟೀಲ, ಪುರಸಭೆ ಸದಸ್ಯ ಮೃತ್ಯುಂಜಯ ಆಲೂರೆ, ಶಿವಪುತ್ರ ನಡಗೇರಿ, ತಾ.ಪಂ ಮಾಜಿ ಸದಸ್ಯ ಶಿವಪ್ಪ ವಾರಿಕ, ಮುಖಂಡ ಕಲ್ಯಾಣಿ ದೊಡ್ಡಮನಿ, ಆಕಾಶ ದೇಗಾಂವ, ಮಹಾದೇವ ಕಾಂಬಳೆ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಮುನ್ನೂರು ಕಾಪು ಸಮಾಜದಿಂದ ಪ್ರತಿಭಾ ಪುರಸ್ಕಾರ




ಯುವ ಮಾರ್ಗ ಸುದ್ದಿ

**ರಾಯಚೂರು,ಆ.09–** ನಗರದ ವೀರ ಆಂಜನೇಯ ಕಲ್ಯಾಣ ಮಂಟಪದಲ್ಲಿ ಮುನ್ನೂರು ಕಾಪು ಸಮಾಜವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ರಾಜ್ಯ ಯುವ ಕಾಂಗ್ರೆಸ್ ಮುಖಂಡರಾದ ರವಿ ಬೊಸರಾಜು ಅವರು ಭಾಗವಹಿಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ವಿದ್ಯಾರ್ಥಿಗಳ ಭವಿಷ್ಯದ ಸಾಧನೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವೇಳೆ ಮಾತನಾಡಿದ ರವಿ ಬೊಸರಾಜು ಅವರು, ಪ್ರತಿಭಾವಂತ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ, ಅವರ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸಿದರು.ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಎ. ಪಾಪರೆಡ್ಡಿ, ಬೆಲ್ಲಂ ನರಸರೆಡ್ಡಿ, ಡ್ಯಾಡಿ ಗೋಪಾಲ್ ರೆಡ್ಡಿ, ಎಸ್. ಜನಾರ್ಧನ್ ರೆಡ್ಡಿ ಹಾಗೂ ರಾಯಚೂರು ಮಹಾನಗರ ಪಾಲಿಕೆ ಮೇಯರ್ ಸಾಜಿದ್ ಸಮೀರ್ ಸೇರಿದಂತೆ ನರಸಿಂಹಲು ಮಾಡಗೇರಿ, ಶ್ರೀನಿವಾಸ್ ರೆಡ್ಡಿ, ಜಿ.ತಿಮ್ಮಾರೆಡ್ಡಿ, ನರಸರೆಡ್ಡಿ, ಅಶೋಕ್ ಪೊತಗಲ್ ಹಾಗೂ ಸಮಾಜದ ಹಿರಿಯರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯದ ಮುನ್ನುಡಿ: ಕ್ವಿಟ್ ಇಂಡಿಯಾ ಚಳವಳಿ



**ಕಲಬುರಗಿ,ಆ.09–**ಚರಿತ್ರೆಯ ಇದೇ ದಿನ ಆಗಸ್ಟ್ 8, 1942 ರಲ್ಲಿ ಮುಂಬೈನಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಯು 1947 ರ ಆಗಸ್ಟ್ 15 ರ ಸ್ವಾತಂತ್ರ್ಯಕ್ಕೆ ಮುನ್ನುಡಿಯಾಯ್ತು. ಮಹಾತ್ಮ ಗಾಂಧಿಯವರುಮಾಡು ಇಲ್ಲವೆ ಮಡಿ' ಎನ್ನುವ ಘೋಷಣೆ ಕೊಡುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರತೆಯನ್ನು ತಂದರು. ಭಾರತವನ್ನು ಬಿಟ್ಟು ತೊಲಗಿ ಎನ್ನುವುದು ಬ್ರಿಟೀಷ್ ಸರಕಾರವನ್ನು ಬೆಚ್ಚಿಬೀಳಿಸಿತ್ತು' ಎಂದು ಶಿಕ್ಷಣಶಾಸ್ತ್ರದ ಹಿರಿಯ ಪ್ರಾಧ್ಯಾಪಕರೂ, ಎನ್.ಎಸ್.ಎಸ್. ಘಟಕದ ಅಧಿಕಾರಿಯೂ ಆದ ಸಿದ್ದಪ್ಪ ಎಸ್ ಕಾಂತ ಅವರು ಅಭಿಪ್ರಾಯ ಪಟ್ಟರು.

ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ.ಅಂಬೇಡ್ಕರ್ ಕಲಾ ವಾಣಿಜ್ಯ ಪದವಿ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯದ ಇತಿಹಾಸ ಶಾಸ್ತ್ರ ವಿಭಾಗವು ಆಯೋಜಿಸಿದ್ದ ಕ್ವಿಟ್ ಇಂಡಿಯಾ' ಚಳವಳಿಯ ದಿನಾಚರಣೆಯ ಪ್ರಯುಕ್ತಭಾರತದ ಬಿಟ್ಟು ತೊಲಗಿ ಚಳವಳಿ: ಸ್ವಾತಂತ್ರ್ಯದ ಮುನ್ನುಡಿ' ಎನ್ನುವ ವಿಶೇಷ ಉಪನ್ಯಾಸ ನೀಡಿದ ಪ್ರೊ.ಸಿದ್ದಪ್ಪ ಎಸ್. ಕಾಂತ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧಿಯನ್ನೂ ಒಳಗೊಂಡಂತೆ ಲಕ್ಷಾಂತರ ಜನರ ತ್ಯಾಗ ಬಲಿದಾನವಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಗಾಂಧೀಜಿ ಎಸ್. ಮೋಳೆಕರ್ ಅವರು ಮಾತನಾಡಿ ಕ್ವಿಟ್ ಇಂಡಿಯಾ ಚಳವಳಿಯು ಭಾರತದ ಇತಿಹಾಸದಲ್ಲಿ ಬಹಳ ದೊಡ್ಡ ವಿದ್ಯಮಾನ. ಈ ಚಳವಳಿಯ ಹಿಂದೆ ಗಾಂಧೀಜಿ, ಡಾ.ಬಾಬಾ ಸಾಹೇಬ ಅಂಬೇಡ್ಕರ್, ಸುಭಾಶ್ ಚಂದ್ರಬೋಸ್, ಮೊದಲಾದವರ ತ್ಯಾಗವಿದೆ' ಎಂದು ವಿವರಿಸಿದರು. ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ಅರುಣ್ ಜೋಳದಕೂಡ್ಲಿಗಿ ಅವರು ಮಾತಾನಾಡಿ,ಅಂದು ಗಾಂಧೀಜಿಯ ನಾಯಕತ್ವದಲ್ಲಿ ಬ್ರಿಟೀಷರನ್ನು ಬಿಟ್ಟು ತೊಲಗಿ ಎಂದು ಹೇಳಿದ್ದರು, ಆದರೆ ಇಂದು ವಿದೇಶಿಗರನ್ನು ಭಾರತಕ್ಕೆ ಬಂದು ನಿಮ್ಮ ಬೃಹತ್ ಕಾರ್ಪೊ?ರೇಟ್ ಕಂಪನಿಗಳ ಸ್ಥಾಪಿಸಿ ಎಂದು ಆಹ್ವಾನಿಸುತ್ತಿದ್ದೇವೆ, ಇದು ಕಾಲದ ವೈರುಧ್ಯ ಎಂದರು. ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸುದರ್ಶನ್ ಮದನಕರ್ ಅವರು ಮಾತನಾಡಿ 'ಕ್ವಿಟ್ ಇಂಡಿಯಾ ಮೂವ್ ಮೆಂಟ್ ಭಾರತದ ಸಮಾಜದ ಮೇಲೆ ನಿರ್ಣಾಯಕ ಪ್ರಭಾವ ಬೀರಿದೆ' ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ.ವಿಜಯಕುಮಾರ ಅವರು ಸ್ವಾತಂತ್ರ್ಯ ಹೋರಾಟದ ಚಾರಿತ್ರಿಕ ಹಿನ್ನೆಲೆಯನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಇತಿಹಾಸ ವಿಭಾಗದ ಡಾ.ನಿಂಗಪ್ಪ ಅವರು ಸ್ವಾಗತಿಸಿದರು. ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ. ವಸಂತ್ ನಾಶಿ ಅವರು ನಿರೂಪಿಸಿದರು. ಪ್ರಾಧ್ಯಾಪಕರುಗಳಾದ ಡಾ. ಸಿದ್ದಾರ್ಥ ಮದನಕರ್, ಡಾ. ಕರಿಬಸಪ್ಪ, ಡಾ. ದತ್ತುರಾಯ ಮೊದಲಾದವರು ಉಪಸ್ಥಿತರಿದ್ದರು.

# ಮತಗಳವು ತನಿಖೆ ಬಗ್ಗೆ ಪರಿಶೀಲನೆ



**ಮೈಸೂರು,ಆ.09–**ರಾಜ್ಯದಲ್ಲಿ ನಡೆದಿರುವ ಮತಗಳವಿನ ಬಗ್ಗೆ ತನಿಖೆ ನಡೆಸುವ ಬಗ್ಗೆ ಕಾನೂನು ಇಲಾಖೆಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದ್ದೇನೆ. ವರದಿ ನಂತರ ಮತಗಳುವಿನ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ವಿಮಾನನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಗಳುವಿನ ಬಗ್ಗೆ ಕಾನೂನು ಕ್ರಮಕೈಗೊಳ್ಳುವ ಸಂಬಂಧ ನಮ್ಮ ಕಾನೂನು ಸಲಹೆಗಾರರು ಹಾಗೂ ಕಾನೂನು ಇಲಾಖೆಗೆ ಎಲ್ಲವನ್ನೂ ಕೂಲಂಕುಶವಾಗಿ ಪರಿಶೀಲಿಸಿ ಎಂದು ಹೇಳಿದ್ದೇನೆ. ಇವರು ಪರಿಶೀಲನೆ ನಡೆಸಿ ಸಲಹೆ ಕೊಟ್ಟ ನಂತರ ರಾಜ್ಯಸರ್ಕಾರ ಕಾನೂನು ಕ್ರಮದ ಬಗ್ಗೆ ನಿರ್ಧಾರ ಮಾಡುತ್ತೆ ಎಂದು ಹೇಳಿದರು.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತಗಳವು ಆಗಿರುವುದು ಸತ್ಯ, ಅದನ್ನೇ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಹೇಳಿದ್ದಾರೆ.

ಆರು ತಿಂಗಳು ಅಧ್ಯಯನ ನಡೆಸಿ ಮತಗಳುವಿನ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದರು.

ಬಿಜೆಪಿಯವರು ತಪ್ಪು ಮಾಡಿದ್ದಾರೆ. ಹಾಗಾಗಿ ಮತಗಳವು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ.ಮಹದೇವಪುರ ಕ್ಷೇತ್ರದ ಒಂದು ಚಿಕ್ಕ ಕಟ್ಟಡದಲ್ಲಿ 80 ಮಂದಿ ಮತದಾರರಿದ್ದಾರೆ. ಇದು ಹೇಗೆ ಸಾಧ್ಯ. ಇದನ್ನೆಲ್ಲ ಸಮಗ್ರ ಅಧ್ಯಯನ ಮಾಡಿಯೇ ಮತಗಳುವಿನ ಬಗ್ಗೆ ರಾಹುಲ್‌ಗಾಂಧಿ ಮಾತನಾಡಿದ್ದಾರೆ ಎಂದರು.

ಕಳೆದ 2018ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಾದಾಮಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರು ಮತ ಖರೀದಿ ಮಾಡಿಯೇ ಗೆದ್ದರು ಎಂದು ಮಾಜಿ ಸಚಿವ ಸಿ.ಎಂ ಇಬ್ರಾಹಿಂ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ನನಗೆ ಗೊತ್ತಿಲ್ಲ. ಸಿಎಂ ಇಬ್ರಾಹಿಂ ಈಗ ನಮ್ಮ ಪಕ್ಷದಲ್ಲಿ ಇಲ್ಲ. 2018ರಲ್ಲಿ ಅವರು ನನ್ನ ಪರವಾಗಿ ಕೆಲಸ ಮಾಡಿದ್ದರು.

ಮತ ಖರೀದಿ ಎಂಬುದು ನನಗೆ ಹೊಸ ವಿಚಾರ. ಈ ಬಗ್ಗೆ ನಾನು ಕೇಳೇ ಇರಲಿಲ್ಲ ಎಂದರು. ನಾನು ಬಾದಾಮಿಯಿಂದ ಸ್ಪರ್ಧಿಸಿದ್ದ ಸಂದರ್ಭದಲ್ಲಿ ಎರಡೇ ದಿನ ಅಲ್ಲಿಗೆ ಹೋಗಿದ್ದು, ಒಂದು ನಾಮಪತ್ರ ಸಲ್ಲಿಸುವ ದಿನ, ಮತ್ತೊಂದು ದಿನ ಪ್ರಚಾರಕ್ಕೆ ಹೋಗಿದ್ದೆ ಅದು ಬಿಟ್ಟರೆ ತಮಗೆ ಬೇರೆ ಏನು ವಿಚಾರಗಳು ಗೊತ್ತಿಲ್ಲ ಎಂದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಡಾ. ಎಚ್.ಸಿ ಮಹದೇವಪ್ಪ, ಕೆ. ವೆಂಕಟೇಶ್ ಮತ್ತಿತರರು ಇದ್ದರು.

# ಮೆಟ್ರೋ ಯಾವ ಪಕ್ಷದ ಸ್ವತ್ತಲ್ಲ



**ಬೆಂಗಳೂರು,ಆ.09–**ಬೆಂಗಳೂರು ಮೆಟ್ರೊ ರೈಲು ಯೋಜನೆಯಲ್ಲಿ ರಾಜ್ಯಸರ್ಕಾರದ್ದೇ ದೊಡ್ಡ ಪಾಲಿದೆ. ಇಷ್ಟಾದರೂ ಬಿಜೆಪಿ ಮೆಟ್ರೊ ಕೇಂದ್ರ ಸರ್ಕಾರದ್ದು ಎಂದು ಪ್ರಚಾರ ಮಾಡುತ್ತಿದೆ. ಇದು ಸರಿಯಲ್ಲ, ಮೆಟ್ರೊ ಯಾವ ಪಕ್ಷದ ಸ್ವತ್ತಲ್ಲ,ಜನರ ಸ್ವತ್ತು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ಮೆಟ್ರೊದ ಹಳದಿ ಮಾರ್ಗ ಉದ್ಘಾಟನೆಯಾಗುತ್ತಿದೆ ಮೆಟ್ರೊ ನಮ್ಮದೇ ಅಂತ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಸಂಸದ ತೇಜಸ್ವಿ ಸೂರ್ಯ ಹೇಳುತ್ತಿದ್ದಾರೆ.

ಬಿಜೆಪಿಯವರಿಗೆ ಮೆಟ್ರೊ ಇತಿಹಾಸವೇ ಗೊತ್ತಿಲ್ಲ. ಮೆಟ್ರೊ ಪ್ರಾರಂಭವಾದ್ದು ಮನಮೋಹನ್‌ಸಿಂಗ್ ಪ್ರಧಾನಿಯಾಗಿದ್ದಾಗ ಆಗ ನಾನು ಬೆಂಗಳೂರು ನಗರಾಭಿವೃದ್ಧಿ ಸಚಿವನಾಗಿದ್ದೆ. ಬಿಜೆಪಿಯವರಿಗೆ ಪ್ರಚಾರದ ಹುಚ್ಚು, ಮೆಟ್ರೊ ಮಾಡಿದ್ದು ನಾವೇ ಎಂದು ಹೇಳಿಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಮೆಟ್ರೊಗೆ ರಾಜ್ಯಸರ್ಕಾರದ ದೊಡ್ಡ ಪಾಲಿದೆ ಎಂದರು.

ಮೆಟ್ರೊ ಮೊದಲ ಹಂತಕ್ಕೆ ಭೂಮಿ ಸೇರಿ ರಾಜ್ಯಸರ್ಕಾರ ಶೇ. 30 ರಷ್ಟು ಹಣ ಕೊಟ್ಟಿದೆ. ಕೇಂದ್ರದ್ದು, ಶೇ. 25 ರಷ್ಟು ಮಾತ್ರ. ಉಳಿದ ಶೇ. 45 ಸಾಲದ ಮೂಲಕ ಪಡೆಯಲಾಗಿದೆ. ಹಾಗೆಯೇ ಮೆಟ್ರೊ 2ನೇ ಹಂತಕ್ಕೂ ರಾಜ್ಯಸರ್ಕಾರ ಶೇ. 30 ರಷ್ಟು ಹಣ ಒದಗಿಸಿದೆ. ಕೇಂದ್ರ ಸರ್ಕಾರ ಕೇವಲ 20 ರಷ್ಟು ಅನುದಾನ ನೀಡಿದೆ.

ಉಳಿದ 50ರಷ್ಟು ಹಣವನ್ನು ಸಾಲದ ಮೂಲಕ ಪಡೆದು ಮೆಟ್ರೊ ಪೂರ್ಣಗೊಳಿಸಲಾಗಿದೆ. ಹೀಗಿದ್ದರೂ ಕೇಂದ್ರದ ಸಚಿವರು, ಬಿಜೆಪಿ ಸಂಸದರು, ಕರ್ನಾಟಕಕ್ಕೆ ಮೆಟ್ರೊದ ಕ್ರೆಡಿಟ್ ಕೊಡದೆ ಇರುವುದು ಅಕ್ಷಮ್ಯ ಎಂದು ಬಿಜೆಪಿ ನಾಯಕರ ವಿರುದ್ಧ ಆಕ್ರೋಶ ಹೊರ ಹಾಕಿದರು.

ಬೆಂಗಳೂರು ಮೆಟ್ರೊಗೆ ಕೇಂದ್ರ ಹಾಗೂ ರಾಜ್ಯಸರ್ಕಾರ ವೆಚ್ಚ ಮಾಡಿರುವ ಹಣದ ವಿವರದ ದಾಖಲೆಗಳನ್ನು ಅವರು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಪ್ರತಿ ಹಂತದಲ್ಲೂ ಮೆಟ್ರೊದಲ್ಲಿ ರಾಜ್ಯಸರ್ಕಾರದ್ದೇ ದೊಡ್ಡ ಪಾಲಿದೆ ಎಂದು ಸ್ಪಷ್ಟಪಡಿಸಿದರು.

# ಗೋಡಂಬಿಯ ಆರೋಗ್ಯ ಲಾಭಗಳು

ಗೋಡಂಬಿಯಲ್ಲಿ ಉನ್ನತಮಟ್ಟದ ಒಮೆಗಾ–3 ಅಲ್ಪಾ ಲಿನೋಲೆನಿಕ್ ಆಮ್ಲವಿದೆ ಮತ್ತು ಏಕಪರ್ಯಾಪ್ತ ಆಲಿರೀಕ್ ಆಮ್ಲವಿದೆ. ಇದನ್ನು ಹೊರತುಪಡಿಸಿ,ಇತರವಿವಿಧವಿಟಮಿನ್‌ಗಳು ಹಾಗೂ ಖನಿಜಾಂಶಗಳು ಗೋಡಂಬಿಯಲ್ಲಿದೆ. ಹಲವಾರು ರೀತಿಯ ಪೋಷಕಾಂಶಗಳನ್ನು ಒಳಗೊಂಡಿರುವಗೋಡಂ ಬಿಯಲ್ಲಿರುವ ಉನ್ನತ ಮಟ್ಟದ ಕ್ಯಾಲರಿಯಿಂದಾಗಿ ತೂಕ ಹೆಚ್ಚಿಸಬಹುದು. ಆದ ರೆ ಗೋಡಂಬಿಯು ತೂಕ ಕಳೆದುಕೊಳ್ಳಲು ನೆರವಾಗಲಿದೆ ಎಂದು ನಿಮಗೆ ತಿಳಿದಿದೆಯಾ? ಹೌದು, ಗೋಡಂಬಿಯಿಂದಲೂ ತೂಕ ಕಳೆದುಕೊಳ್ಳಬಹುದು.

ತೂಕ ಹೆಚ್ಚಿಸಲು ಗೋಡಂಬಿಯು ನೆರವಾಗುತ್ತದೆ ಎಂದಾದರೆ ಇದನ್ನು ಯಾಕೆ ಸೇವಿಸಬೇಕು? ಆದರೆ ಗೋಡಂಬಿಯಲ್ಲಿ ಇರುವಂತಹ ಕೆಲವೊಂದು ಆರೋಗ್ಯಲಾಭಗಳ ಬಗ್ಗೆ ತಿಳಿದುಕೊಂಡು ನೀವು ಮುಂದುವರಿಯಿರಿ.

ಗೋಡಂಬಿಯಲ್ಲಿ ಆರೋಗ್ಯಕರ ಕೊಬ್ಬು ಇದ್ದು, ಇದು ಕೊಲೆಸ್ಟ್ರಾಲ್ ಮಟ್ಟ ಕಡಿಮೆ ಮಾಡುವುದು. ಇದರಲ್ಲಿರುವ ಉನ್ನತ ಮಟ್ಟದ ಆಯಂಟಿಆಕ್ಸಿಡೆಂಟ್ ಹೃದಯವನ್ನು ಆರೋಗ್ಯವಾಗಿಡುವುದು.

ಗೋಡಂಬಿಯಲ್ಲಿರುವಂತಹ ಪ್ರೋಟೀನ್ ದಿನವಿಡಿ ನಿಮ್ಮ ದೇಹವು ಶಕ್ತಿಭರಿತವಾಗಿರುವಂತೆ ನೋಡಿಕೊಳ್ಳುವುದು.

ಗೋಡಂಬಿಯಲ್ಲಿ ವಿಟಮಿನ್ ಸಿ, ಥೈಮೇನ್, ವಿಟಮಿನ್ ಬಿ6, ಮ್ಯಾಂಗನೀಸ್, ಸತು, ತಾಮ್ರ, ಕಬ್ಬಿಣ ಮತ್ತು ಪೊಟಾಶಿಯಂ ಇದೆ.

ಹೆಚ್ಚಿನ ಪ್ರಮಾಣದಲ್ಲಿರುವ ಮೆಗ್ನಿಶಿಯಂ ಇದನ್ನೊಂದು ಆರೋಗ್ಯಕರ ಆಹಾರವನ್ನಾಗಿಸಿದೆ. ಇದು ಅಧಿಕ ರಕ್ತದ ಒತ್ತಡವನ್ನು ಕಡಿಮೆಗೊಳಿಸಲು ನೆರವಾಗುತ್ತದೆ. ಇಂದಿನಧಾವಂತದ ದಿನಗಳಲ್ಲಿ ಅಧಿಕ ರಕ್ತದೊತ್ತಡ ಎಲ್ಲೆಡೆ ಸಾಮಾನ್ಯವಾಗಿ ಕಂಡುಬರುತ್ತಿರುವಾಗ ಗೋಡಂಬಿ ಒಂದು ಆಪದ್ಬಾಂಧವನಂತೆ ಕೆಲಸ ಮಾಡುತ್ತದೆ.ಗೋಡಂಬಿಯಲ್ಲಿರುವ ಉತ್ತಮ ಪ್ರಮಾಣದ ತಾಮ್ರಕೂದಲ ಹೊಳಪು ಮತ್ತು ಬಣ್ಣವನ್ನು ಉಳಿಸಿಕೊಳ್ಳಲು ನೆರವಾಗುತ್ತದೆ. ಕೂದಲು ನೆರೆಯಲು ತಾಮ್ರದ ಕೊರತೆ ಅಥವಾ ತಾಮ್ರವನ್ನು ಹಿಡಿದಿಟ್ಟುಕೊಳ್ಳುವ ಕ್ಷಮತೆ ಕಡಿಮೆಯಾಗುವುದೇ ಕಾರಣ ಎಂದು ಇತ್ತೀಚೆಗೆ ತಿಳಿದುಬಂದಿರ ತಿಳಿದುಬಂದಿದೆ.

ಗೋಡಂಬಿಯ ಉತ್ತಮ ಗುಣಗಳು ಇಷ್ಟೇ ಎಂದು ನಿಗದಿಪಡಿಸುವಂತಿಲ್ಲ. ಏಕೆಂದರೆ ಇದರಲ್ಲಿರುವ ಹಲವುಪೋಷಕಾಂಶಗಳು ಎಷ್ಟರ ಮಟ್ಟಿಗೆ ಆರೋಗ್ಯಕ್ಕೆ ಪೂರಕ ಎಂಬುದನ್ನು ದಿನಗಳೆದಂತೆ ಸಂಶೋಧನೆಗಳು ತಿಳಿಸುತ್ತಾ ಬರುತ್ತಿವೆ. ಅಂತೆಯೇ ಇದರಲ್ಲಿರುವ



ಮೆಗ್ನಿಶಿಯಂ ನರವ್ಯವಸ್ಥೆಯನ್ನು ಬಲಪಡಿಸುತ್ತದೆ ಮತ್ತು ಇನ್ನೊಂದು ವಿಶೇಷವೆಂದರೆ ಮೂಳೆಗಳಿಗೆ ಅಂಟಿಕೊಂಡಿರುವ ನರಗಳ ಗೋಡೆಗಳ ಮೂಲಕ ಕ್ಯಾಲ್ಸಿಯಂ ನರಗಳ ಒಳಭಾಗ ಪ್ರವೇಶಿಸುವುದನ್ನು ತಡೆಯುತ್ತದೆ.

ಒಂದು ವೇಳೆ ಕ್ಯಾಲ್ಸಿಯಂ ಮೂಳೆಗಳಿಂದ ಸಡಿಲವಾಗಿ ನರಗಳು ಹೀರಿಕೊಳ್ಳುವಂತಾದರೆ ನರಗಳು ಗಟ್ಟಿಯಾಗಿಬಿಡುತ್ತವೆ. ಇದು ರಕ್ತದೊತ್ತಡವನ್ನುತ ಹೆಚ್ಚಿಸುತ್ತದೆ ಮತ್ತು ಇತರ ದುಷ್ಪರಿಣಾಮಗಳನ್ನೂ ಹುಟ್ಟುಹಾಕುತ್ತದೆ. ಇದೇ ರೀತಿ ಸ್ನಾಯುಗಳೂ ಸೆಡೆತಗೊಳ್ಳುವುದರಿಂದ ರಕ್ಷಣೆ ಪಡೆಯುತ್ತವೆ ಮತ್ತು ಆರೋಗ್ಯಕ್ಕೆ ಅಗತ್ಯವಿರುವಷ್ಟೇ ಸಡಿಲತೆಯನ್ನು ಸಾಧ್ಯವಾಗುತ್ತದೆ. ಹೊಂದಲು

ಗೋಡಂಬಿಯಲ್ಲಿರುವ ಮೆಗ್ನಿಶಿಯಂ ಮತ್ತು ಕ್ಯಾಲ್ಸಿಯಂ ಮೂಳೆ ಮತ್ತು ಹಲ್ಲುಗಳ ದೃಢತೆಯನ್ನು ಹೆಚ್ಚಿಸಲು ಸಕ್ಷಮವಾಗಿವೆ. ನಿತ್ಯವೂ ನಾಲ್ಕಾರುಗೋಡಂಬಿಗಳನ್ನು ತಿನ್ನುತ್ತಾ ಬಂದರೆ ಮೂಳೆ ಮತ್ತು ಹಲ್ಲುಗಳು ಸದೃಢವಾಗಿರಲು ಸಾಧ್ಯವಾಗುತ್ತದೆ. ಅಲ್ಲದೇಗೋಡಂಬಿ ಒಸಡುಗಳಿಗೂ ಉತ್ತಮವಾಗಿದೆ.

ಆಹಾರ ಕ್ರಮದಲ್ಲಿ ಗೋಡಂಬಿ ಸೇರ್ಪಡೆ ಹುರಿದಿರುವಂತಹಗೋಡಂಬಿಗಳು, ಕರಿದು ಉಪ್ಪು ಹಾಕಿರುವಂತಹ ಗೋಡಂಬಿಗಿಂತ ತುಂಬಾ ಒಳ್ಳೆಯದು. ಕರಿದರೆ ಅದರಲ್ಲಿ ಇರುವಂತಹ ಕೊಬ್ಬು ಮತ್ತಷ್ಟು ಹೆಚ್ಚಾಗುವುದು. ಏಕ ಮತ್ತು ಬಹುಪರ್ಯಾಪ್ತ ಕೊಬ್ಬಿರುವ ಗೋಡಂಬಿಯು ಪ್ರಾಣಿಜನ್ಯಪ್ರೋಟೀನ್ ಮತ್ತು ಕೊಬ್ಬಿಗೆ ಒಳ್ಳೆಯ ಪರ್ಯಾಯ. ಪ್ರಾಣಿಜನ್ಯ ಕೊಬ್ಬು ಹಾಗೂ ಪ್ರೋಟೀನ್ ಗೆ ಗೋಡಂಬಿಯು ಒಳ್ಳೆಯದು ಮತ್ತು ಇದರಿಂದ ರುಚಿಕರ ತಿನಿಸುಗಳನ್ನು ತಯಾರಿಸಬಹುದು.

ಈ ಮೂಲಕವಾಗಿ ನೀವು ತೂಕ ಕಳೆದುಕೊಳ್ಳುವುದು ಮಾತ್ರವಲ್ಲದೆ, ಹೃದಯಲ್ಲಿ ಜಮೆಯಾಗಿರುವ ಕೊಬ್ಬು ಮತ್ತು ಕೊಲೆಸ್ಟ್ರಾಲ್ ತಗ್ಗಿಸಬಹುದು. ನಿಮ್ಮ ಆಹಾರಕ್ರಮದಲ್ಲಿ ಗೋಡಂಬಿ ಸೇರಿಸಲುಒಳ್ಳೆಯ ವಿಧಾನವೆಂದು ಒಂದು ಹಿಡಿ ಹಸಿ ಗೋಂಡಂಬಿ ಸೇವಿಸುವುದು. ಇದನ್ನು ನಿಮ್ಮ ಆಹಾರ ಅಥವಾ ಬೇರೆ ಯಾವುದೇ ತಿನಿಸಿನೊಂದಿಗೆ ಸೇರಿಸಬಹುದು. ಸಲಾಡ್, ಬೀನ್ಸ್, ಯಾವುದೇ ತಿಂಡಿ ಜತೆಗೆ ಸೇರಿಸಿಕೊಳ್ಳಿ

# ವಿಕ್ರಂ–1 ಉಡಾವಣೆಗೆ ಮೊದಲ ಹಂತ ಯಶಸ್ವಿ




**ನವದೆಹಲಿ, ಆ.09–** ಸ್ಕೈರೂಟ್ ಏರೋಸ್ಪೇಸ್ ತನ್ನ ಶಕ್ತಿಶಾಲಿ ಕಲಾಂ 1200 ಘನ ರಾಕೆಟ್ ಮೋಟಾರ್, ವಿಕ್ರಮ್–1 ಉಡಾವಣಾ ವಾಹನದ ಮೊದಲ ಹಂತ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಶನಿವಾರ ಬೆಳಗ್ಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ

ಬೆಳಿಗ್ಗೆ 9:05 ಕ್ಕೆ ಉಡಾವಣಾ ಕೇಂದ್ರದಿಂದ ಸ್ಟ್ಯಾಟಿಕ್ ಟೆಸ್ಟ್ ಕಾಂಪ್ಲೆಕ್ಸ್‌ನಲ್ಲಿ ನಡೆಸಲಾದ ಪರೀಕ್ಷೆ ಯಶಸ್ವಿಯಾಗಿದ್ದು ಹೈದರಾ ಬಾದ್ ಮೂಲದ ಸ್ಕೈರೂಟ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ ನಿರ್ಮಿಸುತ್ತಿರುವ ವಿಕ್ರಮ್ –1 ಅಭಿವೃದ್ಧಿಯಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ.

ಇಸ್ರೋ ಪ್ರಕಾರ, ಕಲಾಂ 1200 ಮೋಟಾರ್ 11 ಮೀಟರ್ ಉದ್ದ, 1.7 ಮೀಟರ್ ವ್ಯಾಸದ ಏಕಶಿಲೆಯ ಸಂಯೋಜಿತ ಮೋಟಾರ್ ಆಗಿದ್ದು, ಶ್ರೀಹರಿಕೋಟಾದ ಘನ ಪ್ರೊಪೆಲ್ಲಂಟ್ ಸ್ಥಾವರದಲ್ಲಿ ತಯಾರಾದ ಅತಿ ಉದ್ದದ ಏಕಶಿಲೆಯ ಮೋಟಾರ್ ಆಗಿದೆ ಎಂದು ಹೇಳಲಾಗಿದೆ.

ಪ್ರಯೋಗಕ್ಕಾಗಿ ಬಳಸಲಾಗುವ ವಿಶೇಷ ಪರೀಕ್ಷಾ ನಿಲುವನ್ನು ಸಹ ಇಸ್ರೋ ವಿನ್ಯಾಸಗೊಳಿಸಿದ್ದು ಸಾಧನೆ ಭಾರತ ಸರ್ಕಾರದ ಬಾಹ್ಯಾಕಾಶ ನೀತಿ 2023ಕ್ಕೆ ಅನುಗುಣವಾಗಿದೆ ಎಂದು ತಿಳಿಸಿದೆ.

ಭಾರತದ ಬಾಹ್ಯಾಕಾಶ ಆರ್ಥಿಕತೆಯನ್ನು ಹೆಚ್ಚಿಸಲು ಇಸ್ರೋದ ತಾಂತ್ರಿಕ ಮೂಲಸೌಕರ್ಯ ಮತ್ತು ಪರಿಣತಿಯನ್ನು ಬಳಸಲು ಪ್ರೋತ್ಸಾಹಿಸುತ್ತದೆ ಎಂದು ಇಸ್ರೋ ತಿಳಿಸಿದೆ.

ಇಸ್ರೋ ಅಧ್ಯಕ್ಷ ಡಾ. ವಿ. ನಾರಾಯಣನ್ ಪ್ರತಿಕ್ರಿಯಿಸಿ ನಾಸಾ–ಇಸ್ರೋ ಜಂಟಿಯಾಗಿ ನಿರ್ಮಿಸಿದ ಸಿಂಥೆಟಿಕ್ ಅಪರ್ಚರ್ ರಾಡಾರ್ ಉಪಗ್ರಹದ ಯಶಸ್ವಿ ಉಡಾವಣೆಯಯ ಕಾರ್ಯಾಚರಣೆಯನ್ನು ಶ್ಲಾಘಿಸಿದ್ದು ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ಜಿಎಸ್ ಎಲ್ ವಿ ರಾಕೆಟ್ ಬಳಸಿ "ಇದುವರೆಗಿನ ಅತ್ಯಂತ ನಿಖರವಾದ ಉಡಾವಣೆಗಳಲ್ಲಿ ಒಂದಾಗಿದೆ" ಎಂದು ಹೇಳಿದ್ದಾರೆ

# ಗುವಿವಿ ಕನ್ನಡ ಪಠ್ಯಬೋಧನೆಯ ಅವಧಿ ಹೆಚ್ಚಿಸಲು ಆಗ್ರಹಿಸಿ ಮನವಿ



**ಕಲಬುರಗಿ,ಆ.09–** ರಾಜ್ಯ ಶಿಕ್ಷಣ ನೀತಿಯನ್ವಯ ಐಚ್ಛಿಕ ಕನ್ನಡ ಪಠ್ಯಬೋಧನೆಯ ಕಾರ್ಯಭಾರದ ಅವಧಿಯನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಖಾಜಾವಲಿ ಈಚನಾಳ ನೆತೃತ್ವ ನಿಯೋಗ ಗುಲ್ಬರ್ಗಾ ವಿಶ್ವ ವಿದ್ಯಾಲಯ ಕುಲಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರಸ್ತುತ ಶೈಕ್ಷಣಿಕ ವರ್ಷ 2024–25ನೇ ಸಾಲಿನಿಂದ ರಾಜ್ಯ ಶಿಕ್ಷಣ ನೀತಿಯನ್ವಯ ಐಚ್ಛಿಕ ಕನ್ನಡ ಪಠ್ಯಬೋಧನೆಯ ಕಾರ್ಯಭಾರವನ್ನು ವಾರಕ್ಕೆ ಐದು ಅವಧಿಯನ್ನು ನಿಗದಿಪಡಿಸಲಾಗಿದೆ. ಆದರೆ ಇದೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಾದ ಬೆಂಗಳೂರು, ಮಂಗಳೂರು, ಮೈಸೂರ, ಧಾರವಾಡ, ತುಮಕುರ, ದಾವಣಗೆರೆ ಇಲ್ಲಿ ವಾರಕ್ಕೆ ಆರು ಗಂಟೆಗಳ ಬೋಧನಾ ಅವಧಿಯನ್ನು ನಿಗದಿಪಡಿಸಿದ್ದಾರೆ ಇದೇ ಮಾದರಿಯಲ್ಲಿ ಇಲ್ಲಿನ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿಯೂ ಜಾರಿಗೆ ತರುವಂತೆ ನಿಯೋಗ ಒತ್ತಾಯಿಸಿದೆ.

ಇದರಿಂದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ, ಸಾಹಿತ್ಯ, ಸಾಂಸ್ಕೃತಿಕ ಚರಿತ್ರೆಯನ್ನು ಮೂರು ವರ್ಷದ ಸ್ನಾತಕ ಪದವಿ ಅವಧಿಯಲ್ಲಿ ಕಲಿಸಲು ಬೋಧನಾ ಅವಧಿಯು ಸಾಕಾಗುವುದಿಲ್ಲ. ಆದ ಕಾರಣ ಐಚ್ಛಿಕ ಕನ್ನಡದ ಕಾರ್ಯಭಾರವನ್ನು ವಾರಕ್ಕೆ ಐದು ಗಂಟೆಯ ಬದಲಾಗಿ ಆರು ಗಂಟೆಗೆ ಹೆಚ್ಚಿಸಿ ವಿದ್ಯಾರ್ಥಿಗಳ ಕಲಿಕೆಗೆ ಮತ್ತು ಅಧ್ಯಾಪಕರ ಬೋಧನೆಗೆ ಅನುಕೂಲ ಮಾಡಿಕೊಡಬೇಕೆಂದು ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ನಿಯೋಗದಲ್ಲಿ ಸಂಘದ ಅಧ್ಯಕ್ಷ ಡಾ.ಖಾಜಾವಲಿ ಈಚನಾಳ, ಡಾ.ಪಂಡಿತ್ ಬಿಕೆ, ಬಸಣ್ಣ ಕಾಗೆ, ಡಾ.ನಾನಗೌಡ ಪಾಟೀಲ್, ಸಿದ್ಧಲಿಂಗ ದಬ್ಬಾ, ಡಾ.ಶರಣಪ್ಪ ಚಕ್ರವರ್ತಿ, ಡಾ.ಎಂ. ಬಿ ಹೂಗಾರ್, ಸುನೀಲ್ ಕುಮಾರ್, ಎಂ.ಎಂ. ಮೇತ್ರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ತೋಟಗಾರಿಕೆ ದಿನಾಚರಣೆಗೆ ಸಿಇಓ ಡಾ.ಗಿರೀಶ ಬದೋಲೆ ಚಾಲನೆ



**ಬೀದರ,ಆ.09–** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ, ತೋಟಗಾರಿಕೆ ಮಹಾವಿದ್ಯಾಲಯ ಬೀದರ ಹಾಗೂ ತೋಟಗಾರಿಕೆ ಇಲಾಖೆ (ಜಿಲ್ಲಾ ಪಂಚಾಯತ) ಬೀದರ ಇವರುಗಳ ಸಹಯೋಗದೊಂದಿಗೆ ದಿ. ಡಾ. ಎಂ. ಎಚ್. ಮರೀಗೌಡರ 109 ನೇ ಜನ್ಮ ದಿನದ ನಿಮಿತ್ಯ ಶುಕ್ರವಾರದಂದು ತೋಟಗಾರಿಕೆ ಮಹಾವಿದ್ಯಾಲಯ ಬೀದರನಲ್ಲಿ ಹಮ್ಮಿಕೊಂಡಿದ್ದ ತೋಟಗಾರಿಕೆ ದಿನಾಚರಣೆ ಆಚರಿಸಲಾಯಿತು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ ದಿಲೀಪ ಬದೋಲೆ ಅವರು ದಿ. ಡಾ. ಎಂ. ಎಚ್. ಮರೀಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ತೋಟಗಾರಿಕೆ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದಿ. ಡಾ. ಎಂ. ಎಚ್. ಮರೀಗೌಡರ ಸಾಧನೆಗಳ ಕುರಿತು ಮಾತನಾಡುತ್ತಾ, ಅವರು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳಾದ ಲಾಲ್‌ಬಾಗ್ ಸ್ಥಾಪನೆ, ಹಲವು ತೋಟಗಾರಿಕೆ ಕ್ಷೇತ್ರಗಳ, ನರ್ಸರಿಗಳ ಸ್ಥಾಪನೆ ಹಾಪಕಾಮ್ಸ್ ಅಭಿವೃದ್ಧಿಗಳ ಮೂಲಕ ಕರ್ನಾಟಕದಲ್ಲಿ ತೋಟಗಾರಿಕೆ ಕ್ಷೇತ್ರವು ವಿಜೃಂಭಿಸುವಲ್ಲಿ ಕಾರಣಿಭೂತರೆಂದು ನೆನೆದರು.

ರಾಯಚೂರ ಕೃಷಿ ವಿಶ್ವವಿದ್ಯಾಲಯದ ನಿವೃತ ಶಿಕ್ಷಣ ನಿರ್ದೇಶಕ ಡಾ. ಎಂ. ಜಿ. ಪಾಟೀಲ ಮಾತನಾಡಿ, ಕರ್ನಾಟಕದಲ್ಲಿ ತೋಟಗಾರಿಕೆ ಕ್ಷೇತ್ರ ಮುಂಚೂಣಿಗೆ ಬರಲು ದಿ. ಡಾ. ಎಂ. ಎಚ್. ಮರೀಗೌಡರ ದೂರ ದೃಷ್ಟಿ ವ್ಯಕ್ತಿತ್ವವೆ ಮುಖ್ಯ ಕಾರಣವೆಂದು ಹೇಳುತ್ತಾ ವಿದ್ಯಾರ್ಥಿಗಳು ಕೇವಲ ಸರ್ಕಾರಿ ಕೆಲಸಕ್ಕೋಸ್ಕರ ಪದವಿ ಪಡೆಯದೇ ಸ್ವಯಂ ಉದ್ಯಮಿಗಳಾಗಲು ಪದವಿ ಪಡೆಯಿರಿ ಎಂದು ಕರೆ ನೀಡಿದರು.

ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಎಸ್.ವಿ. ಪಾಟೀಲ ಮಾತನಾಡಿ, ಕೃಷಿ ಆಹಾರ ಭದ್ರತೆಗಾಗಿದ್ದರೆ ತೋಟಗಾರಿಕೆ ಪೌಷ್ಟಿಕಾಂಶ ಹಾಗೂ ಆರ್ಥಿಕ ಭದ್ರತೆಗಾಗಿದೆ. ತೋಟಗಾರಿಕೆ ಮಹಾವಿದ್ಯಾಲ ಬೀದರ ಪ್ರತಿ ವರ್ಷ ಸುಮಾರು 15 ಲಕ್ಷ ಮೌಲ್ಯದ ತೋಟಗಾರಿಕೆ ಸಸಿಗಳನ್ನು ರೈತರಿಗೆ ತಲುಪಿಸುವ ಮುಖಾಂತರ ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು.

ಬೀದರ ಜಿಲ್ಲಾ ಪಂಚಾಯತ ತೋಟಗಾರಿಕೆ ಉಪ ನಿರ್ದೇಶಕ ಮಲ್ಲಿಕಾರ್ಜುನ್ ಬಾವುಗೆ ಮಾತನಾಡಿ, ತೋಟಗಾರಿಕೆ ಇಲಾಖೆಯಿಂದ ಲಭ್ಯವಿರುವ ವಿವಿಧ ಯೋಜನೆಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ರೈತರಿಗೆ ಉಚಿತವಾಗಿ ಪೌಷ್ಟಿಕ ಕೈತೋಟ ಕಿಟ್ ಹಾಗೂ ಸಂಪದ್ಭರಿತ ಎರೆ ಗೊಬ್ಬರ ನೀಡಲಾಯಿತು.

# ಶಾಲೆಯ ಅಭಿವೃದ್ಧಿಯಲ್ಲಿ ಎಸ್ಡಿಎಂಸಿ ಪಾತ್ರ ಬಹು ಮುಖ್ಯ



**ಅರಕೇರಾ,ಆ.09–**ಶಾಲೆಯು ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷಕರ ಜತೆಗೆ ಎಸ್ಡಿಎಂಸಿ ಪಾತ್ರ ಬಹು ಮುಖ್ಯವಾಗಿದೆ ಎಂದು ಮುಖ್ಯ ಗುರು ನಾಗೇಶ್ ಚವ್ಹಾಣ ಹೇಳಿದರು.

ತಾಲೂಕಿನ ಪೂಜಾರಿ ಸೀತಮ್ಮ ತಾಂಡದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಎಸ್ಡಿಎಂಸಿ ರಚನೆ ವೇಳೆ ಮಾತನಾಡಿ. ಸ್ಥಳೀಯವಾಗಿ ಶಾಲೆಗೆ ಅಗತ್ಯವಾಗಿರುವ ಬೇಕು ಬೇಡಗಳನ್ನು ಒದಗಿಸಿ ಸಮರ್ಪಕವಾಗಿ ಶಾಲೆಯ ಅಭಿವೃದ್ಧಿಗೆ ಪ್ರಯತ್ನಿಸುವ ಹೊಣೆ ನಿಮ್ಮ ಮೇಲಿದೆ ಎಂದರು. ಹಾಗೆಯೇ ನೂತನವಾಗಿ ರಚನೆಗೊಂಡ ಶಾಲಾ ಮೇಲುಸ್ತುವಾರಿ ಸಮಿತಿಯ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸಿದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ವ್ಯವಸ್ಥಾಪಕ ವಿನಯ್ ಕುಮಾರ್ ರಾಠೋಡ ಅವರು ಶಾಲೆಗೆ ಘಂಟೆಯನ್ನು ದೇಣಿಗೆ ನೀಡಿ ಮಾತನಾಡುತ್ತ. ಎಸ್ಡಿಎಂಸಿ ಸಹಕಾರದಿಂದ ಶಾಲೆಗಳು ಪ್ರಗತಿ ಕಾಣಲಿವೆ. ಶಾಲಾ ಸಮುದಾಯವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ಜಾಣ್ಮೆ ಶಾಲೆಯ ಮೇಲುಸ್ತುವಾರಿ ಸಮಿತಿಗೆ ಇರಬೇಕು. ಅಭಿವೃದ್ಧಿ ಕಾಣಲು ಶಿಕ್ಷಕರು ಹಾಗೂ ಮಕ್ಕಳ ಪ್ರಯತ್ನದ ಜತೆಗೆ ಎಸ್ಡಿಎಂಸಿ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ನಂತರ ಶಾಲೆಯ ವತಿಯಿಂದ ನೂತನ ಎಸ್ಡಿಎಂಸಿ ಅಧ್ಯಕ್ಷ ತಿಪ್ಪಣ್ಣ ರಾಠೋಡ ಹಾಗೂ ಉಪಾಧ್ಯಕ್ಷೆ ಲಲಿತಾ ಹಾಗೂ ಪದಾಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಭಾರಿ ಮುಖ್ಯ ಗುರು ನಾಗೇಶ್ ಚವ್ಹಾಣ,ಅತಿಥಿ ಶಿಕ್ಷಕ ಶಂಕರ್ ಚವ್ಹಾಣ,ದೇವೇಂದ್ರ ರಾಥೋಡ್,ವಿಠಲ್ ಚವ್ಹಾಣ,ರಾಮ್ ಜೀ ನಾಯಕ್,ದೇನಪ್ಪ ಚವ್ಹಾಣ, ಧರ್ಮೀ ಬಾಯಿ,ವನಿತಾ ಚವ್ಹಾಣ,ವೆಂಕಟೇಶ್ ರಾಠೋಡ್, ಸೇರಿದಂತೆ ಊರಿನ ಹಿರಿಯರು ಹಾಗೂ ಪಾಲಕರು ಉಪಸ್ಥಿತರಿದ್ದರು.

# ಒಳ ಮೀಸಲಾತಿಗೆ ಜಾರಿಗೆ ಆಗ್ರಹಿಸಿ ಆ.11ರಂದು ಅನಿರ್ದಿಷ್ಟ ಅಹೋರಾತ್ರಿ ಸತ್ಯಾಗ್ರಹ



ಯುವ ಮಾರ್ಗ ಸುದ್ದಿ

**ಸಿರವಾರ,ಆ.09–**ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಜಾರಿಗೆ ಮುಂದಿನ ಮಳೆಯ ಅಧಿವೇಶನದಲ್ಲಿ ಒಳ ಮೀಸಲಾತಿ ಗ್ಯಾರಂಟಿಗೆ ಆಗ್ರಹಿಸಿ ಬೆಂಗಳೂ ರಿನ ಪ್ರೀಡಂ ಪಾರ್ಕ್ ನಲ್ಲಿ ಅನಿರ್ದಿಷ್ಟ ಅಹೋ ರಾತ್ರಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂ ದು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ಮುಖಂಡರಾದ ಚನ್ನಪ್ಪ ಬೂದಿನಾಳ ಅವರು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಸುದ್ದಿ ಗೋಷ್ಠಿಯನ್ನು ದ್ದೇಶಿಸಿ ಮಾತನಾಡಿದ ಅವರು,ಕಳೆದ 30 ವರ್ಷಗಳಿಂದಲೂ ಒಳ ಮೀಸಲಾತಿ ಜಾರಿಗೊಳಿಸುವಂತೆ ಒತ್ತಾಯಿಸಿ ಹೋರಾಟ ನಡೆಸಿದರೂ ಸಹ ಯಾವುದೇ ಸರ್ಕಾರಗಳು ಗಮನ ಹರಿಸುತ್ತಿಲ್ಲ. ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ನಿವೃತ್ತ ನ್ಯಾ.ಮೂ ನಾಗಮೋಹನ್ ದಾಸ್ ಅವರಿಗೆ ಒಳ ಮೀಸಲಾತಿ ಸಮೀಕ್ಷೆ ನಡೆಸುವಂತೆ ಮೇ. ನಲ್ಲಿ ಸರ್ಕಾರ ಆದೇಶ ಮಾಡಿತ್ತು ಇದೆ ಅ. 04 ರಂದು ಸರ್ಕಾರಕ್ಕೆ ಒಳ ಮೀಸಲಾತಿ ವರದಿ ಸಲ್ಲಿಸಿದ್ದು, ನಂತರ ಮುಖ್ಯ ಮಂತ್ರಿ ಸಿದ್ದರಾಮ ಯ್ಯ ನೇತೃತ್ವದಲ್ಲಿ ಅ.7 ರಂದು ಸಚಿವ ಸಂಪುಟ ಸಭೆ ಕರೆಯಲಾಗಿತ್ತು. ಇದಕ್ಕೆ ಕೆಲ ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಮತ್ತೆ ಎಲ್ಲಾ ಸಚಿವರಿಗೆ ಮತ್ತು ಶಾಸಕರಿಗೆ ವರದಿ ಯನ್ನು ನೀಡಿ ನೋಡಿ ಕೊಂಡು ಓದಿ ಕೊಂಡು ಬನ್ನಿ ಇದೆ ಅ.16 ರಂದು ಸಚಿವ ಸಂಪುಟದಲ್ಲಿ ಚರ್ಚಿಸಿ ಜಾರಿ ಗೊಳಿಸುತ್ತೇವೆ ಎಂದು ಮುಖ್ಯ ಮಂತ್ರಿಯವರು ಮುಂದಕ್ಕೆ ಹಾಕಿದ್ದಾರೆ ಹೀಗಾಗಿ ಕಾದು ನೋಡೋಣ ಒಳ ಮೀಸಲಾತಿ ಜಾರಿ ಆಗುವವರೆಗೂ ಅಲ್ಲಿಯ ವರೆಗೆ ನಮ್ಮ ಹೋರಾಟ ನಿರಂತರವಾಗಿರುತ್ತೆ ಎಂದು ಎಚ್ಚರಿಸಿದರು.

ಹೀಗಾಗಿ ಅ.11 ರಂದು ಬೆಂಗಳೂರಿನ ಪ್ರೀಡಂ ಪಾರ್ಕ್ ನಲ್ಲಿ ಅನಿರ್ದಿಷ್ಟ ಅಹೋರಾತ್ರಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ ನಮ್ಮ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆ ಯಲ್ಲಿ ಹಿರಿಯರು – ಯುವಕರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಂಆರ್‌ಎಚ್‌ಎಸ್ ಮಾನ್ವಿ ತಾಲೂಕಾಧ್ಯಕ್ಷ ಯಲ್ಲಪ್ಪ ವಕೀಲರು ಹಿರೇಬಾದರದಿನ್ನಿ,ಯಲ್ಲಪ್ಪ ಸೀಕಲ್, ಬಸವ ರಾಜ ಅತ್ತನೂರು,ಮುತ್ತಣ್ಣ ಚಾಗಬಾವಿ,ಅಮರೇಶ ಅತ್ತನೂರು, ಮಲ್ಲಪ್ಪ ಜಿಂದಾವಲಿ,ವಿರೇಶ ಹರವಿ,ಪ್ರಭಾಕರ್ ಹರನಹಳ್ಳಿ, ಬಸವರಾಜ ಶಾಖಾಪುರ,ಜಯರಾಜ ಜಾಡಲ ದಿನ್ನಿ,ಹನುಮೇಶ ಶಾಖಾಪುರ, ಯಲ್ಲಪ್ಪ ನವಲಕಲ್, ಬಸವರಾಜ ಜಂಬಲದಿನ್ನಿ, ದುರುಗಪ್ಪ ಕೆ.ಗುಡದಿನ್ನಿ,ಹನುಮಂತ ಗುಡದಿ ನ್ನಿ,ರಮೇಶ ಭಂಡಾರಿ ಮಲ್ಲಟ, ಆನಂದ,ಭೀಮಣ್ಣ ಜಕ್ಕಲದಿನ್ನಿ, ಸೇರಿದಂತೆ ಇತರರು ಇದ್ದರು.

# ಸ್ವಾತಂತ್ರ್ಯದ ಚರ್ಚೆ ನಾವು ನೀವು ಮಾಡಬೇಕು ,ಬಲಿದಾನ ನೆನೆಯಬೇಕು :ಮಹ್ಮದ್ ಹುಸೇನ್

ಯುವ ಮಾರ್ಗ ಸುದ್ದಿ



**ಮಾನ್ವಿ,ಆ.09–**ಸ್ವಾತಂತ್ರ್ಯ ದಿನಾಚರಣೆಯ ಅಂದರೆ ಕೇವಲ ರಜೆಯಲ್ಲ, ನಾವು ಈ ದಿನ ರಾಷ್ಟನಾಯಕರ ಬಲಿದಾನ ನಮ್ಮ ಹಕ್ಕು ನಮ್ಮ ಕರ್ತವ್ಯಗಳನ್ನು ಸ್ಮರಿಸುವ ದಿನವಾಗಿದೆ. ಇಂದು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವನ್ನು ಪಡೆದು ಕೊಳ್ಳಲು ಹಲವಾರು ಮಹಾನೀಯ ನಾಯಕರು ಪ್ರಾಣವನ್ನೇ ಒತ್ತೆ ಇಟ್ಟು ನಮಗೆ ಸ್ವಾತಂತ್ರ್ಯ ವನ್ನು ದೊರಕಿಸಿ ಕೊಟ್ಟಿದ್ದಾರೆ ಹಾಗೂ ಸ್ವಾತಂತ್ರ್ಯ ಪೂರ್ವದಲ್ಲಿ ಅನಕ್ಷರತೆ,ದಾರಿದ್ರ್ಯ, ಆರೋಗ್ಯಸಮಸ್ಯೆಗಳು,ಆಹಾರದ ಕೊರತೆ, ಸಾರಿಗೆ ಮತ್ತು ಸಂಪರ್ಕದ ಕೊರತೆ, ಕೈಗಾರಿಕಾ ಹಿಂದುಳಿದಿರುವಿಕೆ ಇಂತಹ ಹಲವಾರು ಸಮಸ್ಯೆಗಳನ್ನು ನಮ್ಮ ದೇಶ ಹೆದರಿಸುತ್ತಿತ್ತು. ಸ್ವಾತಂತ್ರ್ಯ ಬಂದ ನಂತರ ಕೆಲವು ಬದಲಾವಣೆಗಳನ್ನು ಕಾಣುತ್ತಿದ್ದೇವೆ ಎಂದು ಹೇಳಿದರು. ಅಜೀಮ್ ಪ್ರೇಮ್ ಜೀ ಫೌಂಡೇಶನ್ ಸಂಪನ್ಮೂಲ ವ್ಯಕ್ತಿ ಮಹ್ಮದ್ ಹುಸೇನ್ ಮಾಡಗಿರಿ ವಿವರಿಸಿದರು.

ಅಜೀಮ್ ಪ್ರೇಮ್ ಜೀ ಪೌಂಡೇಷನ್ ವತಿಯಿಂದ ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಿಶೇಷ ಚರ್ಚೆ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.ಪ್ರಾಸ್ತಾವಿಕ ಭಾಷಣದಲ್ಲಿ ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಶಂಕರಪ್ಪ ಅಂಗಡಿ ಅಜೀಮ್ ಪ್ರೇಮ್ ಜೀ ಫೌಂಡೇಶನ್ ನಡೆದು ಬಂದ ಹಾದಿಯ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ವೇಧಿಕೆಯಲ್ಲಿ ಡಾ. ಹುಲಿಯಪ್ಪ ದುಮತಿ ಆಡಳಿತ ಮಂಡಳಿಯ ಕಾರ್ಯದರ್ಶಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಸ್ವಾತಂತ್ರ್ಯ ನಮಗೆ ಯಾವ ರೀತಿ ಸಿಕ್ಕಿದೆ ಎಂದು ತಿಳಿದುಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷರಾದ ಆಂಜನೇಯ ನಸಲಾಪುರು ಉಪನ್ಯಾಸಕರಾದ ಮಹಿಬೂಬ್ ಮದ್ಲಾಪುರ ಚಂದ್ರಶೇಖರ. ಹೆಚ್, ಅಂಬಣ್ಣ ನಾಯಕ ಉಮಳಿ ಹೊಸೂರ್,ಶೈಲಾ,ಆಫ್ರಿನ್ ಬೇಗಂ, ಅನ್ನಪೂರ್ಣ, ರೇಣುಕಾ, ಸಂತೋಷ. ಮತ್ತು ವಿದ್ಯಾರ್ಥಿಗಳು ಇದ್ದರು ಕು.ಧರಣಿ ನಿರೂಪಿಸಿದರೆ, ಮಹೇಶ್ ಸ್ವಾಗತಿಸಿದರು, ಕು. ಅಶ್ವಿನಿ ವಂದಿಸಿದರು.

# ವಿಶ್ವ ಬುಡಕಟ್ಟು ಜನಾಂಗ ದಿನಾಚರಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.09–**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳೀಯ ಸಂಸ್ಥೆ ಮಾನ್ವಿ ವತಿಯಿಂದ ಮಾನ್ವಿ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಬುಡಕಟ್ಟು ಜನಾಂಗ ದಿನಾಚರಣೆ ಆಚರಿಸಲಾಯಿತು. ಕನ್ನಡ ಶಿಕ್ಷಕ ಮೋಹನ್ ಸಿಂಗ್ ಮಾತನಾಡುತ್ತಾ ಮಕ್ಕಳಿಗೆ ಬುಡಕಟ್ಟು ಜನಾಂಗದ ಬಗ್ಗೆ ಮಾಹಿತಿ ನೀಡಿದರು. ಅವರ ಜೀವನ ವಿಧಾನ, ಭಾಷೆ, ಸಂಸ್ಕೃತಿ, ನೃತ್ಯ ಹೀಗೆ ಹಲವಾರು ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಿ ಆ ಜನಾಂಗದ ಬಗ್ಗೆ ವಿಶೇಷ ಜಾಗೃತಿ ಮಕ್ಕಳಲ್ಲಿ ಮೂಡಿಸಿದರು. ಸಂದರ್ಭದಲ್ಲಿ

ವಿದ್ಯಾರ್ಥಿಗಳು ಬುಡಕಟ್ಟು ಜನಾಂಗದ ಜನರ ವೇಷ ಭೂಷಣ ಧರಿಸಿ ವಿಶೇಷ ನೃತ್ಯಗಳನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದ ಆಯೋಜನೆಯನ್ನು ಸ್ಕೌಟ್ ಗೈಡ್ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಪಿಜಿಆರ್ ಸಿಂಧ್ಯಾ ಅವರ ಆಶಯದಂತೆ, ಸ್ಕೌಟ್ ಈ ಸಂಸ್ಥೆಯ ವಾರ್ಷಿಕ ಕಾರ್ಯ ಸೂಚಿ ಅನ್ವಯ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಕಾರ್ಯದರ್ಶಿ ಸೈಯದ್ ಮುಜುತಾಬಾ ಖಾದ್ರಿ, ಮುಖ್ಯ ಗುರುಗಳಾದ ನಾಗರತ್ನ ದೇಸಾಯಿ, ಶಿಕ್ಷಕ ಹಾಗೂ ಸ್ಕೌಟ್ ಗೈಡ್ ಸ್ಥಳೀಯ ಸಂಸ್ಥೆಯ

ಜಂಟಿ ಕಾರ್ಯದರ್ಶಿ ನರಸಿಂಹಮೂರ್ತಿ ದೇಸಾಯಿ ಸೇರಿದಂತೆ ಶಿಕ್ಷಕ ವೃಂದ, ವಿದ್ಯಾರ್ಥಿಗಳು,ಇತರೆ ಸಿಬ್ಬಂದಿ ಹಾಗೂ ಪಾಲಕರು ಉಪಸ್ಥಿತರಿದ್ದರು.

# ನೂಲಿ ಚಂದಯ್ಯ ದಿನಾಚರಣೆ ಕಾರ್ಯಕ್ರಮ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಆ.09–**ಕಾಯಕ ಯೋಗಿ ನೂಲಿ ಚಂದಯ್ಯನವರ ತತ್ವ ಆದರ್ಶಗಳನ್ನು ಜೀವನದಲ್ಲಿ ಎಲ್ಲಾರೂ ಅಳವಡಿಸಿಕೊಳ್ಳಬೇಕೆಂದು ಉಪನ್ಯಾಸಕ ಯಮನೂರಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀ ಉಮಾಮಹೇಶ್ವರಿ ಮಹಿಳಾ ಪದವಿ ಕಾಲೇಜಿನಲ್ಲಿ ನೂಲಿ ಚಂದಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕಾಯಕ ನಿಷ್ಠೆಯಲ್ಲಿ ನುಲಿಯ ಚಂದಯ್ಯರಂತಹ ಶರಣರ ತತ್ವ ಸಿದ್ದಾಂತಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಕಾಯಕದಲ್ಲಿ ಕೈಲಾಸ ಕಂಡ ಮಹಾನ್ ಶರಣರು ಶ್ರೀ ನುಲಿಯ ಚಂದಯ್ಯ ನವರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ವಿರೇಶ, ಚನ್ನಬಸವ, ಶಂಕ್ರಪ್ಪ ಸೇರಿ ವಿದ್ಯಾರ್ಥಿಗಳು ಇದ್ದರು

# ರೋಗಿಗಳ ಚಿಕಿತ್ಸೆಗೆ ಅಸಡ್ಡೆ ಸಹಿಸಲಾಗದು



**ಬೀದರ್,ಆ.09–** ಬ್ರಿಮ್ಸ್ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಹೆಚ್ಚಾಗಿದೆ. ಸೂಕ್ತ ಚಿಕಿತ್ಸೆ ಸಿಗದಿರುವ ಬಗ್ಗೆ ಹಾಗೂ ಅಗತ್ಯ ವ್ಯವಸ್ಥೆ ಕಲ್ಪಿಸದಿರುವ ಬಗ್ಗೆ ದಿನವೂ ರೋಗಿಗಳ, ಕುಟುಂಬಸ್ಥರ ಗೋಳು ಸಾಮಾನ್ಯವಾಗಿವೆ. ಸಮಸ್ಯೆ ಹೊತ್ತು ಬರುವವರಿಗೆ ಸೂಕ್ತ ಚಿಕಿತ್ಸೆ ನೀಡದೇ ಅಸಡ್ಡೆ ವಹಿಸುವುದು ಸಹಿಸಲಾಗದು ಎಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಎಚ್ಚರಿಸಿದ್ದಾರೆ.

ಶುಕ್ರವಾರ ಸಂಜೆ ಬ್ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಬೀದರ್ ದಕ್ಷಿಣ ಕ್ಷೇತ್ರದ ಮನ್ನಾಎಖ್ಖೆಳ್ಳಿಯಲ್ಲಿ ಇತ್ತೀಚೆಗೆ ನಾಯಿ ಕಡಿದು ಗಾಯಗೊಂಡ ಮಕ್ಕಳು ಸೇರಿದಂತೆ ಇತರೆ ರೋಗಿಗಳ ಆರೋಗ್ಯ ವಿಚಾರಿಸಿದ ಅವರು, ಆಸ್ಪತ್ರೆಯಲ್ಲಿ ಸಿಗುತ್ತಿರುವ ಚಿಕಿತ್ಸೆ ಹಾಗೂ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದರು. ರೋಗಿಗಳು ಹಾಗೂ ಸಂಬಂಧಿಕರು ಹಲವಾರು ಗೋಳು ತೋಡಿಕೊಂಡಿದ್ದಕ್ಕೆ ಶಾಸಕರು ಬ್ರಿಮ್ಸ್ ಅವ್ಯವಸ್ಥೆ ಬಗ್ಗೆ ಸಿಡಿಮಿಡಿಗೊಂಡರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H